₹ 5/-

# ನೇಸರು
ತಿಂಗಳೋಲೆ

PAGES 20

JUNE 2024 | Nesaru Tingalole | Vol. XLII - 06



## ಬದಲಾಗುತ್ತಿರುವ ಹವಾಮಾನ
## ಮಾಯವಾಗುತ್ತಿರುವ ಹಸಿರು

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# ಅಸೋಸಿಯೇಷನ್‌ನಲ್ಲಿ ಅಕ್ಷಯ ತೃತೀಯ ಪೂಜೆ





ಮೇ 10ರಂದು ಅಕ್ಷಯ ತೃತೀಯ ಹಬ್ಬವನ್ನು ಆಚರಿಸಲಾಯಿತು. ಅಂದು ನಮ್ಮ ಅಸೋಸಿಯೇಷನ್‌ನಲ್ಲಿ ಗಣಪತಿ ಪ್ರತಿಷ್ಠಾಪನೆ ಮಾಡಿದ ದಿನ. ಹಾಗಾಗಿ ನಾವು ಪ್ರತಿ ವರ್ಷ ಅಕ್ಷಯ ತೃತೀಯ ಹಬ್ಬವನ್ನು ಗಣಪತಿ ಪ್ರತಿಷ್ಠಾಪನ ದಿನವಾಗಿ ಆಚರಿಸುತ್ತಾ ಬಂದಿದ್ದೇವೆ. ಈ ವರ್ಷ ಕೂಡ ಮೊದಲಿಗೆ ಗಣಪತಿ ಪೂಜೆ ಸಂಕಲ್ಪದೊಂದಿಗೆ ಗಣಪತಿ ಪೂಜೆ ಮಾಡಿ ಮತ್ತು ಗಣಪತಿ ಹೋಮ ಸಹ ಮಾಡಿ ಮಹಾಮಂಗಳಾರತಿ ಮಾಡಿ ಭಜನೆಗಳನ್ನು ಹಾಡಿ ಪ್ರಸಾದ ವಿನಿಯೋಗ ಮಾಡಿದೆವು. ನಮ್ಮ ಡಾ. ಮಂಜುನಾಥ್‌ರವರು ಗಣಪತಿ ಪ್ರತಿಷ್ಠಾಪನೆ



ಮಾಡಿದ ಪ್ರಸಂಗ ಮತ್ತು ಅದರಿಂದ ನಮಗೆ ಉಂಟಾದ ಶುಭ ಸಂದೇಶದ ಬಗ್ಗೆ ವಿವರಿಸಿದರು.

ನೇಸರು ತಿಂಗಳೋಲೆ

ಸಂಪುಟ - 42 ಜೂನ್- 2024 ಸಂಚಿಕೆ-6

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

# ದೃಢ ವಿಶ್ವಾಸವೇ ಬಾಳಿಗೆ ಸೋಪಾನ



✍ **ಡಾ. ಜ್ಯೋತಿ ಸತೀಶ್**

ಜೀವನದಲ್ಲಿ ನಾವಿರಿಸಿರುವ ಅಚಲ ನಂಬಿಕೆ, ವಿಶ್ವಾಸ ನಮ್ಮನ್ನು ಮುಂದೆ ಸಾಗಲು ಪ್ರೇರೇಪಿಸುತ್ತದೆ. ಈ ಪ್ರಕೃತಿಯಲ್ಲಿ ವಾಸಿಸುವ ಪ್ರತಿಯೊಂದು ಜೀವಿಗೂ ಅಂತ್ಯವಿದ್ದೇ ಇದೆ. ನಾಳಿನ ಭಯಕ್ಕೆ ಇಂದಿನ ದಿನವನ್ನು ಬಲಿಕೊಡುವುದನ್ನು ಕಾಣುವುದಿಲ್ಲ. ಮುಂಜಾನೆಯ ಸೂರ್ಯನ ಕಿರಣಗಳ ಸ್ಪರ್ಶದಿಂದ ಕಣ್ಣು ತೆರೆಯುವ ಹೂವುಗಳಿಗೆ ತಾವು ಒಂದು ದಿನದ ಅತಿಥಿ, ಈ ಕ್ಷಣಿಕ ಸುಖಕ್ಕಾಗಿ ಯಾಕೆ ಅರಳಬೇಕು ಹಾಗೆ ಮುದುಡಿಕೊಂಡಿರುವ ಎಂದು ಯಾಕೆ ಅನಿಸುದಿಲ್ಲ. ಮೃಗ ಪಕ್ಷಿಗಳಂತೆ ಮನುಷ್ಯನಿಗೇಕೆ ನಿಶ್ಚಿಂತೆಯಿಂದ ಇರಲು ಸಾಧ್ಯವಿಲ್ಲ? ಈ ಸಂದರ್ಭದಲ್ಲಿ ನಾನೆಲ್ಲೊ ಓದಿದ ಕವಿತೆಯೊಂದು ನೆನಪಾಗುತ್ತದೆ.


"ಹಾರಾಡೋ ಪಕ್ಷಿಗಳ ಬಾನಲ್ಲಿ ನೀ ನೋಡು
ಬೀಜವ ಬಿತ್ತೋಲ್ಲಾ, ಕೂಡಿಸಿಡೋಲ್ಲ
ಹೊತ್ತೊತ್ತಿಗೆ ತುತ್ತು ಕೂಳನ್ನು
ನೀಡಲು ದೇವನು ಮರೆತಿಲ್ಲ" – (ಅನಾಮಿಕ)

ಮನುಷ್ಯನನ್ನು ಬಿಟ್ಟು ಮತ್ತೆಲ್ಲ ಪ್ರಾಣಿ ಪಕ್ಷಿಗಳು ತಮ್ಮ ಪಾಲಿಗೆ ಬಂದ ದಿನವನ್ನು ಭವಿಷ್ಯದ ಯೋಚನೆಯಿಲ್ಲದೆ ಆನಂದದಿಂದ ಅನುಭವಿಸುವುದನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಬದುಕಿನ ಬಗೆಗಿರುವ ಅಚಲವಾದ ನಂಬಿಕೆ. ನಾವು ಮನುಷ್ಯರು ನೂರಾರು ಕನಸುಗಳನ್ನು ಕಟ್ಟಿಕೊಂಡು ಜೀವನವನ್ನು ನಡೆಸಲು ಪ್ರಯತ್ನಿಸುತ್ತೇವೆ. ಅದರಲ್ಲಿ ನನಸಾಗದ ಕನಸುಗಳು ಹಲವಾರು. ನನಸಾದ ಕನಸಿನ ಬಗೆಗೆ ಚಿಂತಿಸದೇ ನನಸಾಗದ ಕನಸುಗಳತ್ತ ನಮ್ಮ ಚಿತ್ತವನ್ನು ಕೇಂದ್ರೀಕರಿಸಿಕೊಳ್ಳುತ್ತೇವೆ. ಅದರಲ್ಲೇ ದಿನವಿಡಿ ಕೊರಗುತ್ತೇವೆ. ನಮ್ಮ ಮಕ್ಕಳ, ಮೊಮ್ಮಕ್ಕಳ ಸುಭದ್ರ ಜೀವನವನ್ನು ಕಟ್ಟಿಕೊಡುವುದಕ್ಕಾಗಿ ವರ್ತಮಾನದ ನಮ್ಮ ದಿನವನ್ನು ಜಂಜಾಟದಲ್ಲಿ ಕಳೆಯುತ್ತೇವೆ.

ಒಮ್ಮೆ ಒಬ್ಬ ಉದ್ಯಮಿಯೊಬ್ಬನ ಫ್ಯಾಕ್ಟರಿಗೆ ಬೆಂಕಿ ಬಿದ್ದು ಎಲ್ಲ ಸುಟ್ಟು ಬೂದಿಯಾಗುತ್ತದೆ ಅಂತೆ. ಆಗ ಆ ಉದ್ಯಮಿ ಹೇಳುತ್ತಾನಂತೆ, ಎಲ್ಲವೂ ಬೆಂಕಿಯಲ್ಲಿ ಸುಟ್ಟು ಬೂದಿಯಾಯಿತು, ಆದರೆ ಅದೃಷ್ಟವಶಾತ್ ನನ್ನ ನಂಬಿಕೆ ಮತ್ತು ಆತ್ಮವಿಶ್ವಾಸಕ್ಕೆ ಏನೂ ಆಗಿಲ್ಲ. ನಾಳೆ ಪುನಃ ನನ್ನ ಉದ್ಯಮವನ್ನು ಕಟ್ಟಿ ನಿಲ್ಲಿಸುವೆ ಎಂದನಂತೆ. ಇದು ಆತ್ಮವಿಶ್ವಾಸ. ಬದುಕಿನಲ್ಲಿ ಬರುವ ಕಷ್ಟಗಳನ್ನು ಕಂಡು ಬೆನ್ನು ತಿರುಗಿಸುವುದಕ್ಕಿಂತ, ಅವುಗಳ ವಿರುದ್ಧ ಹೋರಾಡಿದರೆ ಯಶಸ್ಸು ಖಂಡಿತ.


ಜೀವನದಲ್ಲಿ ಏನೂ ಇಲ್ಲದ ನಿರ್ಗತಿಕರನ್ನು, ಬಡವರನ್ನು ನೋಡಿ, ಅವರ ಜೀವನಶೈಲಿಯನ್ನು ನೋಡಿದರೆ ನಿಜವಾದ ವಿಶ್ವಾಸ ಎನ್ನುವ ಪದದ ಅರ್ಥ ನಮಗರಿವಾಗುತ್ತದೆ. ಹುಟ್ಟಿಸಿದ ದೇವರು ಕೈಬಿಡುವುದಿಲ್ಲ ಎನ್ನುವ ಅಚಲ ನಂಬಿಕೆಯಿಂದ ಜೀವನವನ್ನು ಕಳೆಯುತ್ತಾರೆ. ಎರಡು ಕೈಯಿಲ್ಲ, ಕಾಲಿಲ್ಲದ ವ್ಯಕ್ತಿಗಳಲ್ಲಿರುವ ಆತ್ಮವಿಶ್ವಾಸವನ್ನು ನೋಡಿದರೆ ಸರ್ವಾಂಗಗಳು ಇರುವ ನಮಗೆ ನಮ್ಮ ದೌರ್ಬಲ್ಯದ ಅರಿವು ಉಂಟಾಗುವುದರಲ್ಲಿ ಆಶ್ಚರ್ಯವಿಲ್ಲ. ನಮ್ಮಲ್ಲಿರುವ ದೌರ್ಬಲ್ಯವೇ ನಮ್ಮ ಸಾಧನೆಗೆ ಮೆಟ್ಟಿಲನ್ನಾಗಿ ಬಳಸಿಕೊಳ್ಳಬೇಕು. ದೌರ್ಬಲ್ಯವನ್ನು ಮೆಟ್ಟಿನಿಲ್ಲಬೇಕೇ ಹೊರತು, ದೌರ್ಬಲ್ಯ ನಮ್ಮ ಅಸ್ತಿತ್ವವನ್ನೇ ಹೊಸಕಿ ಹಾಕುವುದಕ್ಕೆ ಅವಕಾಶ ನೀಡಬಾರದು. ಬಾಳಿನಲ್ಲಿ ನಮ್ಮ ಮನಸ್ಸಿನೊಳಗಿರುವ ವೈಕಲ್ಯವನ್ನು ನಿವಾರಿಸಿಕೊಳ್ಳುವುದು ಮುಖ್ಯ. ನಮ್ಮ ಸಾಧನೆಗೆ ನಮ್ಮ ದೌರ್ಬಲ್ಯಗಳು ಅಡ್ಡಿಯಾಗಬಾರದು, ಸಾಧಿಸಲೇಬೇಕೆಂಬ ಅದಮ್ಯ ಛಲವನ್ನು ಮೈಗೂಡಿಸಿಕೊಂಡರೆ ಮಾತ್ರ ಜೀವನದಲ್ಲಿ ಮುಂದೆ ಬರಲು ಸಾಧ್ಯ."ಆಲೋಚನೆಗಳನ್ನು ಅವುಗಳ ಪಾಡಿಗೆ ಬಿಡಿ, ಜಯ ಪಡೆಯುವುದಕ್ಕೆ ಇದೊಂದೇ ದಾರಿ" ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಈ ಸಂದರ್ಭದಲ್ಲಿ ನೆನೆಯೋಣ.

# ಹೊರನಾಡ ಕನ್ನಡಿಗನ ಅಪ್ರತಿಮ ಸಾಧನೆ
## ಬಹುಮುಖ ಪ್ರತಿಭೆಯ ನ್ಯಾಯಾಧೀಶ ಬಿ. ಎನ್. ಶ್ರೀಕೃಷ್ಣ



✍ ಪ್ರೊ. ಜಿ. ಎನ್. ಉಪಾಧ್ಯ

(ಜಸ್ಟಿಸ್ ಬಿ. ಎನ್. ಶ್ರೀಕೃಷ್ಣ ಅವರು ದೂರದ ಮುಂಬೈಯಲ್ಲಿ ನೆಲೆಸಿ ಕನ್ನಡ ಮಾಧ್ಯಮದಲ್ಲಿ ಓದಿ ಮೇಲೆ ಬಂದು ಮಾಡಿದ ಸಾಹಸ ಸಾಧನೆಯ ಕುರಿತಾದ ಕಿರು ಲೇಖನ ಇಲ್ಲಿದೆ.)



"ಖ್ಯಾತ ವಿಜ್ಞಾನಿ ಡಾ.ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭ,ಮುಂಬೈನ ಹೆಸರಾಂತ ಸಂಸ್ಥೆಯೊಂದರ ಪದಾಧಿಕಾರಿಗಳು ದೆಹಲಿಗೆ ತೆರಳಿ ರಾಷ್ಟ್ರಪತಿ ಡಾ. ಕಲಾಂ ಅವರನ್ನು ಕಂಡು ತಮ್ಮ ಸಂಸ್ಥೆಯ ಕಾರ್ಯಕ್ರಮಕ್ಕೆ ಆಹ್ವಾನಿಸಲು ಮನವಿ ಮಾಡಿದಾಗ ಡಾ. ಕಲಾಂ ಅವರು ಆ ಕಾರ್ಯಕ್ರಮದ ವಿವರ ಕೇಳಿ ಒಪ್ಪಿಗೆ ಸೂಚಿಸಲು ತುಸು ನಿರಾಸಕ್ತಿ ತಾಳಿದಾಗ ಸಂಘಟಕರಲ್ಲಿ ಒಬ್ಬರು ಜಸ್ಟಿಸ್ ಬಿ. ಎನ್. ಶ್ರೀಕೃಷ್ಣ ಅವರ ಶಿಖರ ಭಾಷಣವಿದೆ ಎಂದದ್ದೇ ತಡ ಡಾ. ಕಲಾಂ ಅವರು ತಕ್ಷಣವೇ ಹೌದೇ, ಹಾಗಾದರೆ ನಾನು ಈ ಕಾರ್ಯಕ್ರಮಕ್ಕೆ ಖಂಡಿತ ಬರುವೆ, ನಾನು ಅವರ ಅಭಿಮಾನಿ, ಶ್ರೀಕೃಷ್ಣ ಅವರ ಭಾಷಣವನ್ನು ಕೇಳಲು ನಾನು ಉತ್ಸುಕನಾಗಿರುವೆ ಎಂದು ಒಪ್ಪಿಗೆ ಸೂಚಸಿದರಂತೆ. ಆ ಬಳಿಕ ನಿಗದಿಯಾದ ದಿನದಂದು ರಾಷ್ಟ್ರಪತಿ ಡಾ. ಕಲಾಂ ಅವರು ಮುಂಬೈಗೆ ಬಂದು ಆ ಇಡೀ ಕಾರ್ಯಕ್ರಮದಲ್ಲಿ ಹಾಜರಿದ್ದು ಶ್ರೀಕೃಷ್ಣ ಅವರ ಉಪನ್ಯಾಸ ಕೇಳಿ ಹರ್ಷ ವ್ಯಕ್ತಪಡಿಸಿದರಂತೆ". ಹೀಗೆ ಶ್ರೀಕೃಷ್ಣ ಅವರ ಮಾತಿನ ಮೋಡಿಗೆ ಬೆರಗಾಗದವರು ವಿರಳ.

ಮುಂಬೈಗೆ ವಲಸೆ ಬಂದ ಕನ್ನಡಿಗರು ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಹಸ ಸಾಧನೆ ಬಹು ರೋಚಕವಾಗಿದೆ. ಹಗಲು ದುಡಿದು ರಾತ್ರಿ ಶಾಲೆಯಲ್ಲಿ ಓದಿ ಈ ಮಾಯಾನಗರಿಯ ಬೆಳವಣಿಗೆಗೆ ಮಹತ್ವದ ಯೋಗದಾನ ನೀಡಿದವರ ಪಟ್ಟಿ ಬಲು ದೊಡ್ಡದು. ಹೊರನಾಡಾದ ಮುಂಬೈಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದಿ ಬಳಿಕ ಕಾನೂನು ವಿಷಯಯಲ್ಲಿ ಅಪಾರವಾದ ಪರಿಣತಿ ಸಾಧಿಸಿ ಹೈಕೋರ್ಟ್, ಸುಪ್ರೀಂ ಕೋರ್ಟ್ ಗಳ ನ್ಯಾಯಾಧೀಶರಾಗಿ, ನಾಡಿನ ಗಮನ ಸೆಳೆದ ವಿವಿಧ ಆಯೋಗಗಳ ಅಧ್ಯಕ್ಷರಾಗಿ,ಶ್ರೇಷ್ಠ ವಿದ್ವಾಂಸರಾಗಿ, ಅಪ್ರತಿಮ ವಾಗ್ಮಿಯಾಗಿ ದೇಶ ವಿದೇಶಗಳಲ್ಲಿ ಹೆಸರು ಮಾಡಿದ ಶ್ರೇಯಸ್ಸು ಮುಂಬೈ ಕನ್ನಡಿಗ ಜಸ್ಟಿಸ್ ಬಿ. ಎನ್. ಶ್ರೀಕೃಷ್ಣ ಅವರಿಗೆ ಸಲ್ಲುತ್ತದೆ. ಅವರು ತಮ್ಮ ಮಾತು ಕೃತಿಗಳ ಮೂಲಕ ಅಂತಾರಾಷ್ಟ್ರೀಯ ಖ್ಯಾತಿಯನ್ನು ಪಡೆದ ಎತ್ತರದ ವ್ಯಕ್ತಿ. ಶ್ರೀಕೃಷ್ಣ ಅವರ ಯಾಶೋಗಾಥೆ ಅಷ್ಟೇ ಅನುಪಮವಾದುದು. ನ್ಯಾಯಾಧೀಶ ಶ್ರೀಕೃಷ್ಣ ಅವರ ವ್ಯಕ್ತಿತ್ವ ಬಹು ಆಯಾಮವುಳ್ಳದ್ದು. ಅವರೊಬ್ಬ ಘನ ಕಾನೂನು ತಜ್ಞ, ಮಹಾನ್ ಚಿಂತಕ, ಜಿಜ್ಞಾಸು, ಗುಣಗ್ರಾಹಿ,ಅನ್ವೇಷಕ, ಬಹು ಭಾಷಾತಜ್ಞ, ಬಹುಶ್ರುತ ಕೋವಿದ, ನ್ಯಾಯಪಕ್ಷಪಾತಿ,ನೇರ ನಡೆನುಡಿಯ ಅಪೂರ್ವ ಚೇತನ. ಶ್ರೀಕೃಷ್ಣ ಅವರು ಬರೇ ನ್ಯಾಯಮೂರ್ತಿಯಲ್ಲ, ಜ್ಞಾನ ವಿಜ್ಞಾನ ಮೂರ್ತಿಯಾಗಿ ಸೈ ಎನಿಸಿಕೊಂಡ ಅಪರೂಪದ ಸಾಹಸ ಪುರುಷ.

ತೈತ್ತಿರೀಯ ಉಪನಿಷತ್ತಿನಲ್ಲಿ ಒಂದು ಮಾತು ಬರುತ್ತದೆ : "ಶಮ, ದಮ, ತಪಸ್ಸು ಏನನ್ನಾದರೂ ಮಾಡು ಆದರೆ ಸ್ವಾಧ್ಯಾಯವನ್ನು ಮಾತ್ರ ಬಿಡಬೇಡ" ಎಂಬುದಾಗಿ. ಈ ಮಾತನ್ನು ಅಕ್ಷರಶ: ಮೈಗೂಡಿಸಿಕೊಂಡ ಶ್ರೇಯಸ್ಸು ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರಿಗೆ ಸಲ್ಲುತ್ತದೆ. ಜಗದಗಲ ಓಡಾಟ ವ್ಯಾಪಕ ಓದು ಅಧ್ಯಯನಕ್ಕೆ ಹೆಸರಾದ ಅವರದು ವಿಶಿಷ್ಟ ವ್ಯಕ್ತಿತ್ವ. ದೇಶ ವಿದೇಶಗಳ ಹದಿನಾಲ್ಕಕ್ಕೂ ಹೆಚ್ಚು ಭಾಷೆಗಳ ಮೇಲೆ ಶ್ರೀಕೃಷ್ಣ ಅವರಿಗೆ ಒಳ್ಳೆಯ ಪ್ರಭುತ್ವ, ಹಿಡಿತ ಇರುವುದು ಒಂದು ಸೋಜಿಗವೇ ಸರಿ. ಉಪನಿಷತ್ತುಗಳನ್ನು ಸಮರ್ಥವಾಗಿ ಓದಿ ವ್ಯಾಖ್ಯಾನ ಮಾಡಬಲ್ಲ ವಿರಳ ಸೂರಿಗಳಲ್ಲಿ ಅವರೂ ಒಬ್ಬರು. ಕಳೆದ ಶತಮಾನದ ತೊಂಬತ್ತರ ದಶಕದ ಆದಿಭಾಗದಲ್ಲಿ ಮುಂಬಯಿಯಲ್ಲಿ ನಡೆದ ಕೋಮುಗಲಭೆಯ ವಿಚಾರಣೆಯ ಆಯೋಗದ ವರದಿ "ಶ್ರೀಕೃಷ್ಣ ಕಮಿಷನ್ ರಿಪೋರ್ಟ್" ರಾಷ್ಟ್ರಾದ್ಯಂತ ಮನೆಮಾತಾಯಿತು. ಯಾವ ರಾಜಕೀಯ ಪಕ್ಷದ ಒತ್ತಡ, ಭಯ, ಮುಲಾಜಿಲ್ಲದೆ ಮಾನವೀಯ ನೆಲೆಯಲ್ಲಿ ನಿಜದ ನೆಲೆಯನ್ನು ದಾಖಲಿಸಿ ಪ್ರಶಂಸೆಗೆ ಪಾತ್ರರಾದ

ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಅವರು ಅಚ್ಚಕನ್ನಡಿಗರೆಂಬುದು ಅಭಿಮಾನದ ಸಂಗತಿ. ಜ್ಞಾನ, ವಿನಯ, ಸೌಜನ್ಯ, ಅಧಿಕಾರ ಹಾಗೂ ಸೃಜನಶೀಲತೆಗಳು ಏಕತ್ರ ಕೂಡುವುದು ಬಹಳ ಅಪರೂಪ. ಅಂಥ ಪ್ರಭಾವಶಾಲಿ ಸಾಧಕ ಅವರಾಗಿದ್ದಾರೆ.

1941ರಲ್ಲಿ ಮೇ 21ರಂದು ಬೆಂಗಳೂರಿನಲ್ಲಿ ಜನಿಸಿದ ಶ್ರೀಕೃಷ್ಣ ಅವರ ಬಾಲ್ಯದ ಶಿಕ್ಷಣ ಮುಂಬೈನ ವಡಾಲದ ಕನ್ನಡ ಶಾಲೆಯಲ್ಲಿ ನಡೆಯಿತು. ಅವರ ತಂದೆ ನಾರಾಯಣಸ್ವಾಮಿ ಮುಂಬೈಯಲ್ಲಿ ಹೆಸರಾಂತ ವಕೀಲರಾಗಿದ್ದರು. ತಾಯಿ ಶಾರದಮ್ಮ. ಶ್ರೀಕೃಷ್ಣ ಮುಂದೆ ವಿಜ್ಞಾನದಲ್ಲಿ ಸ್ನಾತಕ ಪದವಿ ಪಡೆದರು. ಎಲ್ಲವನ್ನು ತೆರೆದ ಕಣ್ಣಿಂದ ನೋಡುವ ಪ್ರವೃತ್ತಿಯನ್ನು ಬೆಳೆಸಿಕೊಂಡ ಶ್ರೀಕೃಷ್ಣನಿಗೆ ಓದಿನಲ್ಲಿ ವಿಶೇಷ ಆಸಕ್ತಿ ಬೆಳೆಯಿತು. ತಂದೆಯಂತೆ ತಾನೂ ಕಾನೂನು ವಿಷಯದಲ್ಲಿ ತಜ್ಞನಾಗಬೇಕೆಂದು ಬಯಸಿ ಮುಂಬಯಿ ವಿಶ್ವದ್ಯಾಲಯದಿಂದ ಎಲ್.ಎಲ್.ಬಿ ಪದವಿ ಹಾಗೂ ಎಲ್.ಎಲ್.ಎಂ ಸ್ನಾತಕೋತ್ತರ ಪದವಿಯನ್ನೂ ಪಡೆದುಕೊಂಡರು. ಕಾರ್ಮಿಕ ಕಾಯಿದೆ, ಕೈಗಾರಿಕಾ ಕಾನೂನು ಅವರ ಅಧ್ಯಯನದ ವಿಶೇಷ ವಿಷಯಗಳಾಗಿದ್ದವು . ಜನಪರ ದೃಷ್ಟಿಕೋನದಿಂದ ಅನೇಕ ಕಾರ್ಮಿಕ ಸಮಸ್ಯೆಗಳನ್ನು ಬಗೆಹರಿಸಲು ಅವರು ಹೋರಾಟ ನಡೆಸಿ ಜಯಶೀಲರಾದರು. ಕಾರ್ಮಿಕರ ಹಿತಾಸಕ್ತಿಗಳನ್ನು ಹತ್ತಿಕ್ಕುವ ಪ್ರಯತ್ನಗಳು ನಡೆದಾಗಲೆಲ್ಲ ಅವರ ದನಿಯಾಗಿ ಹೈಕೋರ್ಟ್, ಸುಪ್ರೀಂಕೋರ್ಟ್‌ಗಳಲ್ಲಿ ವಾದಿಸಿದ ಶ್ರೀಕೃಷ್ಣ ಅವರು ಬಹುಬೇಗ ಜನಪ್ರಿಯ ವಕೀಲರಾಗಿ ಹೆಸರು ಮಾಡಿದರು. ಇವರ ಪ್ರತಿಭೆ, ಕ್ರಿಯಾಶೀಲತೆ ಹಾಗು ವಿದ್ವತ್ತನ್ನು ಗಮನಿಸಿ ಸರಕಾರ ಮುಂಬಯಿ ಹೈಕೋರ್ಟಿನ ಹೆಚ್ಚುವರಿ ನ್ಯಾಯಾಧೀಶನನ್ನಾಗಿ ನೇಮಕ ಮಾಡಿತು. 1992-93 ಮುಂಬಯಿ ಗಲಭೆಯ ವಿಚಾರಣೆಯನ್ನು ಅತ್ಯಂತ ಸಮರ್ಪಕವಾಗಿ ನಡೆಸಿದ ಧೀರ ಪುರುಷ ಅವರು.

ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟಕಾಭಿನಯ ಮುಂತಾದ ಎಲ್ಲ ಕಲೆಗಳಲ್ಲೂ ಅವರಿಗೆ ವಿಶೇಷವಾದ ಆಸಕ್ತಿ. "ಏನೇನೋ ಓದಿನ ಪರಿ ಲೇಸು" ಎನ್ನುವ ಪ್ರವೃತ್ತಿ ಅವರದು. ಸಾಮಾನ್ಯವಾಗಿ ಒಂದು ಉದ್ಯೋಗಕ್ಕೆ ಸೇರಿಕೊಂಡ ಮೇಲೆ, ಮದುವೆಯಾಗಿ ಸಂಸಾರ ಶುರುವಾದಾಗ, ಓದಿನಲ್ಲಿ ಆಸಕ್ತಿ ತೋರಿಸುವವರು ಬಹಳ ಕಡಿಮೆ. ಆದರೆ ಶ್ರೀಕೃಷ್ಣ ಅವರು ಇದಕ್ಕೆ ಅಪವಾದ. ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಅನಂತರವೂ ಅವರ ಜ್ಞಾನ ತೃಷೆ ಹಿಂಗಲಿಲ್ಲ. ಅವರು ಮೈಸೂರು ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡರು. ತತ್ವಶಾಸ್ತ್ರದಲ್ಲೂ ಅವರಿಗೆ ವಿಶೇಷ ಆಸಕ್ತಿಯಿತ್ತು. ಹೀಗಾಗಿ ಮುಂಬಯಿ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಸೌಂದರ್ಯಶಾಸ್ತ್ರ ಡಿಪ್ಲೊಮಾ ಪದವಿ, ಉರ್ದುವಿನಲ್ಲಿ ಡಿಪ್ಲೊಮಾ ಪದವಿ ಹೀಗೆ ಅವರ ಓದು, ಅಧ್ಯಯನ ನಿರಂತರವಾಗಿ ನಡೆದು ಬಂದಿದೆ. ಸಂಸ್ಕೃತದಲ್ಲಿ ಅವರಿಗೆ ವಿಶೇಷವಾದ ಪ್ರಭುತ್ವವಿರುವುದು ಗಮನೀಯ ಅಂಶ. ಭಗವದ್ಗೀತೆ, ವೇದ ವೇದಾಂತಗಳನ್ನು ಚೆನ್ನಾಗಿ ಓದಿ ಅರ್ಥೈಸಿಕೊಂಡ ಅವರು ನಮ್ಮ ದೇಶದ ಹಿರಿಮೆ ಗರಿಮೆಗಳನ್ನು ಅನೇಕ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಎತ್ತಿಹಿಡಿದಿರುವುದು ಉಲ್ಲೇಖನೀಯ ಅಂಶ. ನಿಜ ಅರ್ಥದಲ್ಲಿ ಅವರೊಬ್ಬ ಸಾಂಸ್ಕೃತಿಕ ರಾಯಭಾರಿ.

ಸರ್ವ ಭಾಷಾಮಯಿ ಶಾರದಾ ಎಂಬ ಮಾತಿನಲ್ಲಿ ಅವರಿಗೆ ವಿಶೇಷವಾದ ನಂಬಿಕೆ. ಕನ್ನಡ, ಮರಾಠಿ, ತಮಿಳು, ತೆಲುಗು ಮಲಯಾಳಂ, ಇಂಗ್ಲಿಷ್, ಹಿಂದಿ, ಉರ್ದು, ಪರ್ಷಿಯನ್, ರಷ್ಯನ್, ಜರ್ಮನ್ ಹೀಗೆ ಅನೇಕ ಭಾಷೆಗಳಲ್ಲಿ ಶ್ರೀಕೃಷ್ಣ ಅವರಿಗೆ ಒಳ್ಳೆಯ ಪ್ರಭುತ್ವವಿದೆ. ಮುಂಬಯಿಯ ವಡಾಲದಲ್ಲಿರುವ ರಾಷ್ಟ್ರೀಯ ಕನ್ನಡ ಶಾಲೆಯ ಆಡಳಿತ ಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿ, ಮೈಸೂರು ಅಸೋಸಿಯೇಷನ್‌ನ ಸದಸ್ಯರಾಗಿ, ಇನ್ನನೇಕ ಸಂಘ ಸಂಸ್ಥೆಗಳ ಪಾರುಪತ್ಯಗಾರರಾಗಿ ಅವರು ಗೈದ ಸೇವೆ ಗಮನೀಯ ಅಂಶ. ದ್ವಂದ್ವವಿಲ್ಲದ ನಿಶ್ಚಿತ ಮನೋಭಾವ, ಸ್ನೇಹಪರತೆ, ಮೆಲುಮಾತು, ಸರಳ ಸಜ್ಜನಿಕೆಗೆ ಅವರೊಂದು ಮಾದರಿ. ತಮ್ಮ ಕಾರ್ಯಕ್ಷೇತ್ರದಲ್ಲಿ ಅವರು ತೋರುವ ಧೈರ್ಯ, ತಾಳಿದ ನಿಲುವು ಅವರ ಅನನ್ಯ ವ್ಯಕ್ತಿತ್ವಕ್ಕೆ ಸಾಕ್ಷಿ. 'ನಿನ್ನ ಕೆಲಸವನ್ನು ನೀನು ಮಾಡು' ಎಂಬ ಭಗವದ್ಗೀತೆಯ ಮಾತಿನಲ್ಲಿ ಅವರಿಗೆ ವಿಶೇಷ ನಂಬಿಕೆ. ಹೀಗಾಗಿ ತಾವು ಹಿಡಿದ ಕೆಲಸದಲ್ಲಿ ಅರ್ಪಣಾ ಮನೋಭಾವ, ಶ್ರದ್ಧೆ, ಸಮರ್ಪಣೆ, ನಿಯತ್ತು ನಿಷ್ಠೆ ಸದಾ. ಬದುಕಿನಲ್ಲಿ ಪ್ರಾಮಾಣಿಕತೆಗೆ ಪ್ರಾಧಾನ್ಯ ನೀಡದಿದ್ದರೆ ಸಮಾಜದ ಪ್ರಗತಿ ಅಸಾಧ್ಯ. ನ್ಯಾಯ ಯಾವತ್ತೂ ಸ್ವೇಚ್ಛಾಚಾರಕ್ಕಲ್ಲ, ಸಮಾಜದಿಂದ ತಾನು ಪಡೆದುಕೊಂಡದ್ದಕ್ಕಿಂತ ಹೆಚ್ಚಿನದನ್ನು ಸಮಾಜಕ್ಕೆ ಕೊಡಬೇಕು. ಸಮಾಜದ ಋಣಸಂದಾಯ ನಮ್ಮ ಪ್ರಮುಖ ಧ್ಯೇಯವಾಗಬೇಕೆಂಬ ನಿಲುವು ಅವರದು. ಕೇರಳ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿ ನಿಯುಕ್ತಿಗೊಂಡ ಕೆಲಕಾಲದಲ್ಲೇ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿ ನೇಮಕಗೊಂಡು ಸೇವೆ ಸಲ್ಲಿಸಿದ್ದು ಬಿ.ಎನ್.ಶ್ರೀಕೃಷ್ಣ ಅವರ ಕ್ರತುಶಕ್ತಿಗೆ ಸಾಕ್ಷಿ.

ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರ ಕಾರ್ಯದಕ್ಷತೆ, ಶಿಸ್ತು, ಪ್ರತಿಭೆ ಮೊದಲಾದ ಗುಣಗಳನ್ನು ಗಮನಿಸಿ ಭಾರತ ಸರಕಾರ ಮಹತ್ವದ ಜವಾಬ್ದಾರಿಗಳನ್ನು ಅವರಿಗೆ ವಹಿಸಿತ್ತು. ಮುಂಬೈ ದಂಗೆಯ ಹಿನ್ನೆಲೆಯ ವಿಚಾರಣೆ

ಆಯೋಗ, ಕೇಂದ್ರ ಸರಕಾರದ ಆರನೆಯ ವೇತನ ಆಯೋಗ, ಮದ್ರಾಸ್ ಹೈಕೋರ್ಟಿನ ನ್ಯಾಯವಾದಿಗಳ ದಂಗೆಯ ವಿಚಾರಣ ಸಮಿತಿ, ತೆಲಂಗಾಣ ರಾಜ್ಯ ಸ್ಥಾಪನೆಯ ಆಯೋಗ, ಆರ್ಥಿಕ ರಂಗದಲ್ಲಿ ಶಾಸನಬದ್ದ ಸುಧಾರಣ ಆಯೋಗ, ಹೀಗೆ ಭಾರತ ಸರಕಾರದ ಅನೇಕ ರಾಷ್ಟ್ರೀಯ ಮಟ್ಟದ ಆಯೋಗಗಳ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿ ಸೈ ಎನಿಸಿಕೊಂಡ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಹಿಡಿದ ಕೆಲಸವನ್ನು ಅತ್ಯಂತ ಮುತುವರ್ಜಿಯಿಂದ ಮಾಡುವುದು ಶೀಕೃಷ್ಣ ಅವರ ಕಾರ್ಯವೈಖರಿಯ ವಿಶೇಷತೆ. ಹೀಗಾಗಿ ಅವರು ಕಾರ್ಯನಿರ್ವಹಿಸಿದ ಆಯೋಗದ ವರದಿಗಳೆಲ್ಲ ರಾಷ್ಟ್ರ ಮಟ್ಟದಲ್ಲಿ ಚರ್ಚೆಗೊಳಗಾಗಿರುವುದು ಉಲ್ಲೇಖನೀಯ ಅಂಶ. ಕ್ರಿಯಾಶೀಲತೆಗೆ ಹೆಸರಾಗಿರುವ ಶ್ರೀಕೃಷ್ಣ ಅವರು, ಅನೇಕ ಸಂದರ್ಭಗಳಲ್ಲಿ ಕೇಂದ್ರ ಸರಕಾರದ ವಿವಿಧ ಇಲಾಖೆಗಳಿಗೆ ಕಾನೂನು ವಿಚಾರದಲ್ಲಿ ಮಾರ್ಗದರ್ಶನ ಮಾಡುತ್ತಾ ಬಂದಿರುವುದು ಗಮನೀಯ ಅಂಶ. ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರದು ಹಿತ ಮಿತ ಮೃದುವಚನ. ಅವರು ಪ್ರಚಾರ ಪ್ರಿಯರಲ್ಲ. ಪ್ರಶಸ್ತಿ ಪುರಸ್ಕಾರಗಳ ಬೆನ್ನು ಹತ್ತಿ ಹೋದವರಲ್ಲ. ನಿರಾಡಂಬರದ ಸುಸಂಸ್ಕೃತ ಜೀವನಕ್ಕೆ ಅವರು ಹೆಸರಾದವರು. ಕಟ್ಟುನಿಟ್ಟಾದ ಸಮಯನಿಷ್ಠೆ, ಅಂದಂದಿನ ಕೆಲಸವನ್ನು ಅವತ್ತೇ ಮಾಡಿ ಮುಗಿಸುವುದು ಅವರು ಮೊದಲಿನಿಂದಲೂ ರೂಢಿಸಿಕೊಂಡು ಬಂದಿರುವ ಅಭ್ಯಾಸ.ಈಗ ಅವರಿಗೆ 84ರ ಹರಯ. ಅವರ ಪತ್ನಿ ಡಾ. ಪೂರ್ಣಿಮಾ ಸಹ ಪ್ರತಿಭಾಸಂಪನ್ನ ಸಾಧಕರು. ಶ್ರೀಕೃಷ್ಣ ಅವರು ಬಹುಶ್ರುತರು. ಅವರು ಬರೇ ಶುಷ್ಕ ನ್ಯಾಯಶಾಸ್ತ್ರಜ್ಞರಲ್ಲ. ಭಾರತೀಯ ತತ್ವಶಾಸ್ತ್ರ, ವೇದಾಂತಗಳಲ್ಲಿ ಅವರಿಗೆ ಅಪಾರವಾದ ಹಿಡಿತವಿದೆ. ಅವರು ಸಾಹಿತ್ಯ ಪ್ರಿಯರು, ಉತ್ಕಟ ಕನ್ನಡಾಭಿಮಾನಿ, ತುಂಬಿದ ಕೊಡ, ಋಷಿ ಸದೃಶ ವ್ಯಕ್ತಿ ಎಂದರೆ ಅತ್ಯುಕ್ತಿಯಾಗದು. ಮಾಡುವ ಕೆಲಸದ ಸುತ್ತ ವಿಚಾರದ ಪ್ರಭೆ ಹರಿಸಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದ ಮುಂಬೈ ಕನ್ನಡಿಗ ಜಸ್ಟೀಸ್ ಬಿ. ಎನ್. ಶ್ರೀಕೃಷ್ಣ ಅವರು ಕನ್ನಡಿಗರ ಅಭಿಮಾನ ಮೂರ್ತಿ.ಅವರ ಜೀವನ ಸಾಧನೆ ನಾಡಿಗೆ ಮಾದರಿ.

# ದೇವರಿಲ್ಲದ ಗುಡಿಯು....

ವನಜಾ ರಾಜನ್

ಗುಡಿಗೆ ಹೋಗುವುದು ದೇವರನ್ನು ಪೂಜೆ ಮಾಡಲೆಂದು. ಗುಡಿಯಲ್ಲಿ ದೇವರಿದ್ದಾನೆ ನಂಬಿಕೆ ಇದರ ಹಿನ್ನೆಲೆ. ಎಲ್ಲೆಲ್ಲೂ ಇರುವ ದೇವರನ್ನು ಗುಡಿಯಲ್ಲಿ ಮಾತ್ರ ಕಾಣಲೇಕೆ ಎಂದು ಕೆಲವರ ಆಕ್ಷೇಪಣೆ. ಗುಡಿಗೆ ಹೋಗದವರು ಭಕ್ತರಲ್ಲ ಎನ್ನುವವರು ಇದ್ದಾರೆ. ದೇವರು ಎಲ್ಲೆಲ್ಲೂ ಇದ್ದಾನೆ ನಿಜ. ಅದರಲ್ಲಿ ಎರಡು ಮಾತಿಲ್ಲ! ಆದರೆ ಎಲ್ಲೆಡೆ ಅವನ ಇರವನ್ನು ಗುರುತಿಸುವುದು ನಮ್ಮಂತಹ ಸಾಮಾನ್ಯ ಜನರಿಗೆ ಕಷ್ಟ. ಯೋಗಿಗಳಾದರೆ ನಮ್ಮ ಒಡಲಲ್ಲೇ ದೇವರನ್ನು ನೋಡುತ್ತಾರೆ; ಜ್ಞಾನಿಗಳು ಎಲ್ಲೆಲ್ಲೂ ಕಾಣುತ್ತಾರೆ. ನಮ್ಮಂತಹವರಿಗೆ ಪ್ರತಿಮೆಯಲ್ಲೇ ದೇವರು. ಪ್ರತಿಮೆಯನ್ನು ಇರಿಸಿಕೊಂಡದ್ದು ಗುಡಿ. ಗುಡಿಯಲ್ಲಿ ದೇವರಿಗೆ ನಡೆಯುವ ಪೂಜೆ. ನೂರು ಜನರಲ್ಲಿ ತೊಂಭತ್ತು ಮಂದಿ ಸಾಮಾನ್ಯ ಜನರಿಗೆ ಇದು ಅಗತ್ಯವೆನಿಸುತ್ತದೆ!

ಹಾಗೆಂದಾದರೆ ಒಂದು ಪ್ರತಿಮೆ ದೇವರೆನಿಸಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜವೇ! ಪ್ರತಿಮೆಯೇ ನೇರವಾಗಿ, ಸಾಕ್ಷಾತ್ತಾಗಿ ದೇವರೆಂದು ಯಾವ ಶಾಸ್ತ್ರವೂ ಹೇಳುವುದಿಲ್ಲ. ಪ್ರತಿಮೆಯಲ್ಲಿ ದೇವರ ಸಾನಿಧ್ಯವನ್ನು ಒಡಮೂಡಿಸಿದ ನಂತರವೇ ಅದರ ಪೂಜೆ. ಇಲ್ಲವಾದರೆ ಅದೊಂದು ಗೊಂಬೆ. ಗುಡಿಯೊಂದು ಅಂಗಡಿ. ಪ್ರತಿಮೆಯಲ್ಲಿ ದೇವತಾ ಸಾನಿಧ್ಯ ಒದಗಿ ಬರುವುದು ಮೂರು ಮುಖ್ಯ ಕಾರಣಗಳಿಂದ ಎಂಬುದಾಗಿ 'ಆಗಮ' ಶಾಸ್ತ್ರಗಳು ತಿಳಿಸುತ್ತವೆ.

೧. ಶಿಲ್ಪಿಯ ಕೌಶಲದಿಂದ ಪ್ರತಿಮೆ ಉತ್ತಮ ಕಲಾಕೃತಿಯೆನಿಸಿದರೆ ಅದೊಂದು ಕಾರಣ (ಅಭಿರೂಪ್ಯಾಚ್ಚ ಮೂರ್ತಿನಾಂ) ಪೂಜೆ ಮಾಡುವವನ ನಿಷ್ಠೆ, ಸಂಯಮ, ಪ್ರಾಮಾಣಿಕತೆ ಮುಂತಾದ ಶೀಲ ಸಂಪತ್ತಿ ಇನ್ನೊಂದು ಕಾರಣ (ಅರ್ಚಕಸ್ಯ ತಪೋ ಯೋಗಾಕ್) ಇದು ಮುಖ್ಯವಾದ ಕಾರಣ; ಇದಿಲ್ಲದೆ ದೇವತಾ ಸಾನಿಧ್ಯವಿರದು. ಇನ್ನು ಪೂಜಾ ವಿಧಾನದಲ್ಲಿ ಅಚ್ಚು ಕಟ್ಟು ಕ್ರಮ. ಅರ್ಥ ತಿಳಿದು ಮಾಡುವ ಕ್ರಿಯೆಗಳು, ಇವೆಲ್ಲಾ ಕೂಡಿ ಪೂಜೆಗೊಂದು ಹೆಚ್ಚುಗಾರಿಕೆ ಬರುತ್ತದೆ (ಅರ್ಚನ ಸ್ಯಾತಿಶಾಯನಾಕ್) ಇದು ಮತ್ತೊಂದು ಕಾರಣ ಆಗಮದ ಸ್ವಾರಸ್ಯವೇ ಇದು!

ಈ ಮೇಲಿನ ಮೂರರಿಂದ ಗೊಂಬೆ ಪ್ರತಿಮೆಯಾಗುತ್ತದೆ. ಶಿಲೆ ಶಂಕರನಾಗುತ್ತಾನೆ (ದೇವಃ ಸಾನಿಧ್ಯಮೃಚ್ಛಕ್ತಿ) ಇಂಥ ಪ್ರತಿಮೆಯನ್ನೊಳಗೊಂಡ 'ಗುಡಿ' ಪ್ರಭಾವಯುತವಾಗುತ್ತದೆ. ಈ ಮೂರು ವಿವರಗಳಲ್ಲಿ ಯಾವುದೊಂದರ ಕೊರತೆಯಿದ್ದರೂ ಅದು 'ದೇವರಿಲ್ಲದ ಗುಡಿ'ಯೆನಿಸುವುದು.

# ಪ್ರವಾಸದ ಅನುಭವ ಕಥನ
# ಸರಸ್ವತಿ ವಿದ್ಯಾ ಮಂದಿರದ ಮೂಲಕ 'ದೇಶ ಸುತ್ತು, ಕೋಶ ಓದು' ಎನ್ನುವ ಗಾದೆಯ ಬಳಕೆ



✍ **ಡಾ| ಸುಮಾ ದ್ವಾರಕಾನಾಥ್**

ಓದುಗರೇ, ನನ್ನ ಪ್ರವಾಸದ ಅನುಭವ ಕಥನ ಹಿಂದೆ ಮುಂದೆ ಆಗುತ್ತಿದೆ, ಕ್ಷಮೆ ಇರಲಿ. ಬೆಂಗಳೂರಿನ ಸುತ್ತಮುತ್ತಲಿನ ಓಡಾಟದ ನಂತರ, ರಾಜ್ಯಾದಂತ ಸುತ್ತಿದ ಮೇಲೆ ದೇಶಾದ್ಯಂತ ಎನ್ನುವ ರೂಪು ರೇಷೆ ಹಾಕಿ ಕೊಂಡದ್ದರಿಂದ ಈ ಪ್ರವಾಸದ ಅನುಭವ ಈಗ ಹಂಚಿಕೊಳ್ಳುತ್ತಿದ್ದೇನೆ.

೧೯೬೮ಲನೆಯ ಇಸವಿ. ಹೋಮ್ ಸೈನ್ಸ್ ಪದವೀಧರೆಯಾದ ಮೇಲೆ ತಕ್ಷಣ ಸಿಕ್ಕಿದ್ದೇ ಟೀಚರ್ ಕೆಲಸ. Teaching is half learning ಅನ್ನೋ ಹಾಗೆ ಜಗತ್ತಿನ ಕಡೆ ಕಣ್ಣುತೆರೆದಿದ್ದೇ ಆಗ. ಇಲ್ಲಿ ಸುಮಾರು ೨೦ ವರ್ಷ ಮಕ್ಕಳೊಡಗೂಡಿ ಕಲಿಸಿದ್ದಕ್ಕಿಂತ ಕಲಿತದ್ದೇ ಹೆಚ್ಚು. ಸಾಧಾರಣ ಪ್ರೈಮರಿ ಟೀಚರ್ ಆಗಿದ್ರೂ, ಇನ್ನೂ ೫೦ ವರ್ಷಗಳಾದ ಮೇಲೂ ಇಂದಿಗೂ, ಶಿಷ್ಯರು (ತಾವು ನಿವೃತ್ತಿ ಹೊಂದುವ ವಯಸ್ಸಿನಲ್ಲೂ) ಅದೇ ಆತ್ಮೀಯತೆಯಿಂದ ಬಂದು ಭೇಟಿಯಾಗಿ ಹೋಗುವುದನ್ನು ನೆನಪಿಸಿಕೊಂಡರೆ ಜನ್ಮ ಸಾರ್ಥಕವೆನಿಸುವುದು.

ವಿಷಯಕ್ಕೆ ಬರೋಣ. ಶಾಲೆಯ ಕಾರ್ಯಕ್ರಮಗಳಲ್ಲಿ, ವರ್ಷಕ್ಕೆ ಒಂದು compulsory 'Teacher's Educational Tour ' ಎನ್ನುವ programme ಇತ್ತು. 'ರೋಗಿ ಬಯಸಿದ್ದೂ ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ' ಅನ್ನೋ ಹಾಗೆ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಿತ್ತು. ಮನೆಯಿಂದಲಂತೂ ಊರು ಸುತ್ತುವ ಕನಸು ಕಾಣೋ ಹಾಗಿರಲಿಲ್ಲ. ಹಾಗಾಗಿ ಹೊರಟಿದ್ದೇ ಸೈ.

ಶಾಲೆಯವರು ಅದುವರೆಗೆ ದಕ್ಷಿಣಭಾರತದ ಪ್ರವಾಸವನ್ನೇ ಮಾಡಿದ್ದರಿಂದ ಈ ಸಲ ಉತ್ತರದ ಕಡೆ ಮುಖ ಮಾಡಿದ್ದರು. ೧೯೬೮ ನೆಯ ಇಸವಿ. ನನ್ನ ಮೊದಲ ಪ್ರವಾಸ ಪುಣೆ, ಮುಂಬೈ ಆಗಿತ್ತು. ಪುಣೆಯಲ್ಲಿ ೧೮೯೬ ರಲ್ಲೇ ಮಹರ್ಷಿ ಧೋಂಡೋ ಕೇಶವ ಕರ್ವೆಯವರಿಂದ ಆರಂಭಗೊಂಡಿದ್ದ 'ಹಿಂಜ್ಣೆ ಸ್ತ್ರೀ ಶಿಕ್ಷಣ ಸಂಸ್ಥೆ', ಸಾವಿತ್ರಿಬಾಯಿ ಫುಲೆಯವರ 'ಶಾರದ ಶಿಕ್ಷಣ ಸಂಸ್ಥೆ' ಇವನ್ನೆಲ್ಲಾ ಸಂದರ್ಶಿಸಿ, ಪರ್ವತಿ ಬೆಟ್ಟ, ಕೇಲ್ಕರ್ ಮ್ಯೂಸಿಯಮ್, ಪೇಶ್ವೆಪಾರ್ಕ್ ದಗಡುಶೇಟ್ ಗಣಪತಿ ಎಂದು ಊರು ಸುತ್ತಿ ಬಂದಾಯ್ತು.

ಮುಂದಿನ ಪಯಣ ಮಾಯಾನಗರಿಯಾದ ಮುಂಬೈಗೆ. ರಾಜ ಶಿವಾಜಿ ವಿದ್ಯಾಲಯ ಎನ್ನುವ ಹೆಸರನ್ನು ಹೊಂದಿರುವ ಕಿಂಗ್ ಜಾರ್ಜ್ ಶಾಲೆ ಮೂರು ಮಾಧ್ಯಮಗಳನ್ನು ಹೊಂದಿರುವ ದಾದರ್ ನ ಅತಿ ಪ್ರಸಿದ್ದ ಶಾಲೆ. ಅಲ್ಲಿ ಯ ಪುಟ್ಟ ಮಕ್ಕಳಿಗೆ ಅಡುಗೆ ಮನೆಯ ಸಾಮಗ್ರಿಗಳಾದ ಚಾಕು, ಈಳಿಗೆ ಮಣೆ, ಕತ್ತರಿ ಮುಂತಾದುವನ್ನು ಬಳಸಲು ಕೊಟ್ಟಿರುವುದನ್ನು ನೋಡಿ ನಮಗೆ ಆಶ್ಚರ್ಯವಾಯಿತು.

ಆಗಿನ ಕಾಲದ ಕ್ರಿಕೆಟಿಯರ್, ಪದ್ಮಶ್ರೀ ಅಜಿತ್ ವಾಡೇಕರ್ ಅವರು ನಡೆಸುತ್ತಿದ್ದ 'National college of physical Education' ಗೆ ಸಹ ಭೇಟಿ ನೀಡಿದ್ದ ನೆನಪು. ಮುಂಬೈಯಿಯ ಗೇಟ್ ವೆ ಆಫ್ ಇಂಡಿಯಾ, ಸಿದ್ದಿ ವಿನಾಯಕ, ಜುಹು ಬೀಚ್, ಸಿನಿಮಾತಾರೆಗಳ ಬೀದಿ, ಮರೀನ್ ಲೈನ್ಸ್, ಮಹಾಲಕ್ಷ್ಮಿ ದೇವಸ್ಥಾನ, ಹ್ಯಾಂಗಿಂಗ್ ಗಾರ್ಡನ್ಸ್, ವಿಕ್ಟೋರಿಯ ಟರ್ಮಿನಸ್ ಮುಂತಾದ ಪ್ರೇಕ್ಷಣೀಯ ಸ್ಥಳಗಳನ್ನೆಲ್ಲಾ ಸುತ್ತಿ ಬಂದಿದ್ದಾಯ್ತು. ಊರು ಸುತ್ತುವಾಗ ಬೊಂಬಾಯಿಯ ಸುತ್ತ ಸಮುದ್ರ ಇರುವುದರಿಂದ ಊರು ಹರಡಲು ಜಾಗವಿಲ್ಲದೆ ಮೇಲೆ ಬೆಳೆಯುತ್ತಿರುವುದನ್ನು ಕಂಡು ಆಶ್ಚರ್ಯ ಪಟ್ಟಿದ್ದೆವು. ಈಗ ನೋಡಿದ್ರೆ ಮುಂಬೈ ಮಾತ್ರವಲ್ಲದೆ ಎಲ್ಲ ಊರುಗಳೂ ಮೇಲು ಮೇಲಕ್ಕೆ ಬೆಳೆಯಲು ಆರಂಭವಾಗಿದೆ. ಗಾಂಧಿ ಮಾರ್ಕೆಟ್ ನಮ್ಮೆಲ್ಲರ ಆಕರ್ಷಣೀಯ ಕೇಂದ್ರವಾಗಿತ್ತು. ಕಣ್ಣಿಗೆ ಕಂಡ ವಸ್ತುಗಳನ್ನೆಲ್ಲಾ ಖರೀದಿಸುವ ಹುಚ್ಚು. ಚಿಕನ್ ವರ್ಕ್ ಮಾಡಿರುವ ಪೆಟ್ಟಿಕೋಟ್ ೩ ರೂ ಗೆ ಒಂದು, ೨ ಪೀಸ್ ಸೀರೆ ಅಂತ ಸೂರತ್ ನ ಒಳ್ಳೆ ಆರ್ಗಂಡಿ ವಾಯಿಲ್‌ಗಳು ಕೇವಲ ೪೦ ರೂಪಾಯಿ. ಒಂದರೊಳಗೊಂದು ೫ ಹಿಂಡಾಲಿಯಮ್ ಡಬ್ಬಗಳು ೩೦ ರೂಪಾಯಿ. ಹುಚ್ಚು ಹಿಡಿಯೋದೊಂದು ಬಾಕಿ. ಆದರೆ ನಮ್ಮ ಪರ್ಸ್ ನಮ್ಮ ಕೈ ಹಿಡಿಯುತ್ತಿತ್ತು. ಅಂತೂ ದೂರವೆನಿಸಿದ್ದ ಬೊಂಬಾಯಿಯ ಪಯಣ ನನ್ನನ್ನು ಇಲ್ಲೇ ತಂದು ಹಾಕುವುದೆಂದು ಅಂದು ನಾನು ಕನಸೂ ಕಂಡಿರಲಿಲ್ಲ.

ಮುಂದಿನ ಪಯಣ ಉತ್ತರ ಭಾರತ. ಸುಮಾರು ಒಂದು ತಿಂಗಳ ದೀರ್ಘ ಪಯಣ. ಇದರ ಆರ್ಥಿಕ ವ್ಯವಸ್ಥೆ ತಿಳಿದರೆ ನಿಮಗೆ ನಗು ಬರಬಹುದು. ಶಾಲೆಯಲ್ಲಿ ನಮಗೆ ಬರುತ್ತಿದ್ದ ಸಂಬಳ ತಿಂಗಳಿಗೆ ೧೨೦ ರೂ. ಅದರಲ್ಲಿ ಪ್ರತೀ ತಿಂಗಳೂ ೧೦ ರೂ. ವಾರ್ಷಿಕ ಪ್ರವಾಸಕ್ಕಾಗಿ ಹಿಡಿಯುತ್ತಿದ್ದರು. ಟೀಚರ್ಸ್ ಗೆ ಒಟ್ಟಿಗೆ ಕೊಡಲು ಕಷ್ಟವಾಗಬಾರದೆಂದು ಈ ಯೋಜನೆ. ಹಾಗಾಗಿ ಕೇವಲ ೨೫೦ ರೂ. ನಲ್ಲಿ ಕಾಶ್ಮೀರ, ಬದರಿನಾಥ್ ತನಕ ಭಾರತ ದರ್ಶನ ಮಾಡಿ ಬಂದೆವು.

ನಮ್ಮ ಪ್ರಯಾಣಕ್ಕೆ ಮದ್ರಾಸ್ ಹೆಬ್ಬಾಗಿಲಾದ್ರಿಂದ, ಅಲ್ಲಿಂದ G.T. ಎಕ್ಸ್ ಪ್ರೆಸ್ ನಲ್ಲಿ ಬೆಜವಾಡದ longest platform ಮೂಲಕ ಸಾಗಿ, ಮಧ್ಯ ಪ್ರದೇಶದ ಕಾಡುಗಳ ನಡುವೆ ರೈಲು ಕ್ರಮಿಸುವಾಗ ನವಿಲುಗಳನ್ನು ನೋಡಿದ ಸಂಭ್ರಮವೂ ಜೊತೆಗೆ ಕೂಡಿತ್ತು.

ನಮ್ಮ ಮೊದಲ ತಂಗುದಾಣವಾದ ಒಡಿಸ್ಸಾದ ಪುರಿ ಜಗನ್ನಾಥ ತಲುಪಿದೆವು. ಜಗತ್ಪ್ರಸಿದ್ದ ಪುರಿ ಜಗನ್ನಾಥನ ದರ್ಶನ ಮಾಡಲು, ಸಂಪ್ರದಾಯದಂತೆ ದೇವಾಲಯದ ಬಾಗಿಲಲ್ಲೇ ಕೋಲಿನಿಂದ ಬೆನ್ನಮೇಲೆ ಹೊಡೆಸಿಕೊಂಡು ಒಳಗೆ ಹೋದೆವು. ಜಗನಾಥ, ತನ್ನ ಸೋದರ ಬಲರಾಮ ಮತ್ತು ಸೋದರಿ ಸುಭದ್ರೆಯ ಜೊತೆಗೂಡಿ ನಿಂತ ವರ್ಣಮಯ ಕಾಷ್ಠ ಪ್ರತಿಮೆಯ ದರ್ಶನ ಮಾಡಿದೆವು. ಶಿಲ್ಪವು ಪೂರ್ಣಗೊಳ್ಳುವ ಮೊದಲೇ ರಾಜನ ಆತುರದಿಂದಾದ ಅವಾಂತರದ ಕಥೆ ಕೇಳುತ್ತಾ, ನಮ್ಮ ಡೈರಿಯಲ್ಲಿ ಟಿಪ್ಪಣಿ ಮಾಡಿಕೊಂಡೆವು. ಊರಿಗೆ ಬಂದ ಮೇಲೆ ನಮಗೆ ಅದರ ಪರೀಕ್ಷೆಯೂ ಇರುತ್ತಿತ್ತು. ಜಗನ್ನಾಥ ಹಸಿವಿನ ದೇವರಾದ್ದರಿಂದ, ಪ್ರತಿದಿನದ ಛಪ್ಪನ್ನಾರು ಭೋಗದ ಜೊತೆಗೂ ಅವನಿಗೆ, ಭಕ್ತರು ಅರ್ಪಿಸುತ್ತಿದ್ದ (ಸಣ್ಣಮಡಕೆಯಲ್ಲಿ ಮಾರುತ್ತಿದ್ದ) ಕಿಚಡಿಯ ನೈವೇದ್ಯವೂ ಪ್ರಿಯ.

ಅಲ್ಲಿಯೇ ಶಂಕರಾಚಾರ್ಯರು ಪ್ರತಿಷ್ಠಾಪಿಸಿದ ಪೂರ್ವಾಮ್ನಾಯ ಶಾರದಾ ಪೀಠವನ್ನು ಸಂದರ್ಶಿಸಿ, ಅಲ್ಲಿಯ ಸ್ವಚ್ಛವಾದ ಬೀಚಿನಲ್ಲಿ ಮನಸೋ ಇಚ್ಛೆ ಓಡಾಡಿದೆವು. ಅಲ್ಲಿಯ ಬೆಸ್ತರಿಂದ

ಜಾರೆ ಬಾಸಿ ಬಾಸಿ ಜಾ, ನೌಕಮಾಲೋ ಬಾಸಿ ಜಾ

ಮಹೋನದಿ ಕ ನದಿಕಿನಾರೆ ಜಾರೆ ಬಾಸಿ ಬಾಸಿ ಜಾ

ಎನ್ನುವ ಒಂದು ಒಡಿಯಾ ಹಾಡನ್ನೂ ಕಲಿತೆವು.

ಮಾರನೆ ದಿನ ಪುರಿಯಿಂದ ೩೫ ಕಿ.ಮೀ. ದೂರದಲ್ಲಿರುವ ,೧೩ನೆಯ ಶತಮಾನದಲ್ಲಿ ಗಂಗರಸ ನರಸಿಂಗ ದೇವ ಕಟ್ಟಿಸಿದ ಕಳಿಂಗ ವಾಸ್ತು ಶಿಲ್ಪಕಲೆಯ ವಿಶ್ವ ಪ್ರಸಿದ್ಧ ಪಾರಂಪರಿಕ ತಾಣವೆಂದು ಗುರುತಿಸಿರುವ ಕೊನಾರಕದ ಸೂರ್ಯ ದೇವಾಲಯವನ್ನು ನೋಡಲು ಹೊರಟೆವು. ಆದರೆ ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ಶಿಥಿಲವಾದ, ಪಾಳು ಬಿದ್ದ ದೇವಾಲಯವನ್ನು ಕಂಡಾಗ ಮನುಷ್ಯನ ಬೇಜವಾಬ್ದಾರಿತನಕ್ಕೆ ಮನಸ್ಸು ಮರುಗಿತು. ಸೂರ್ಯನ ರಥದ ಮಾದರಿಯಲ್ಲಿ ಕಟ್ಟಿರುವ ದೇವಾಲಯಕ್ಕೆ ಋತು, ಮಾಸಗಳ ಸಾಂಕೇತಿಕವಾಗಿ ಅಲಂಕೃತಗೊಂಡ ೨೪ ಚಕ್ರಗಳಿದ್ದು, ೭ ಕುದುರೆಗಳ ಸಾರಥ್ಯದಲ್ಲಿ ನಿಂತಿರುವ ಭವ್ಯ ದೇವಾಲಯ. ಸುಮಾರು ೧೨೦೦ ಶಿಲ್ಪಿಗಳು, ಬಿಸು ಮಹಾರಾಣನ ನೇತೃತ್ವದಲ್ಲಿ ೧೨ ವರ್ಷ ಸತತವಾಗಿ ಶ್ರಮಿಸಿ ಕಟ್ಟಿದ ಅದ್ಭುತ ಶಿಲಾ ದೇವಾಲಯ.

ಮುಂದಿನ ಗಮ್ಯ, ಒಡಿಸ್ಸಾದ ರಾಜಧಾನಿಯಾದ ಭುವನೇಶ್ವರದಲ್ಲಿರುವ ಬಹು ಪ್ರಸಿದ್ಧ ಪುರಾತನ ಲಿಂಗರಾಜ ದೇವಾಲಯ. ೧೧ ನೆಯ ಶತಮಾನದಲ್ಲಿ ಸೋಮವಂಶದ ಅರಸ ಯಯಾತಿ ಈ ಭವ್ಯ ದೇವಾಲಯವನ್ನು ಕೆಂಪು ಕಲ್ಲಿನಿಂದ, ಕಳಿಂಗ ವಾಸ್ತು ಶಿಲ್ಪದ ಆಧಾರದ ಮೇಲೆ ಕಟ್ಟಿಸಿರುವನೆಂದು ಪ್ರತೀತಿ. ಇಲ್ಲಿ ಸ್ವಯಂ ಉದ್ಭವವಾಗಿರುವ ಶಿವ ಮತ್ತು ವಿಷ್ಣುವನ್ನು ಕಾಣಬಹುದು. ಗರ್ಭಗುಡಿಯೊಳಗಿನ ಶಿವ, ಲಿಂಗದಂತೆ ಕಾಣದೆ ನೈಸರ್ಗಿಕ ಶಿಲೆ ಶಕ್ತಿಯ ಆಧಾರದ ಮೇಲಿದ್ದಂತಿದೆ. ಅದಕ್ಕೆ ಸ್ವಯಂಭೂ ಎಂದು ಕರೆಯುತ್ತಾರೆ. ಏಕಾಮ್ರ ಕ್ಷೇತ್ರವೆಂದು ಕರೆಯಲ್ಪಡುವ ಲಿಂಗರಾಜ ಮಾವಿನ ಮರದ ಆಶ್ರಯದಲ್ಲಿ ನಿಂತಿರುವುದನ್ನು ಕಾಣಬಹುದು.

ಅಂದಿನ ದಿನವೆಲ್ಲಾ ಪ್ರಯಾಣ ಮಾಡಿ ಆಯಾಸವಾಗಿದ್ದರಿಂದ ಪುರಿಯ ಊರಿನಲ್ಲೇ ಖರೀದಿ ಶುರು ಮಾಡಿಕೊಂಡೆವು. ನಮ್ಮ ಅದೃಷ್ಟಕ್ಕೆ ನಮಗೆ ಮುಂದೆ ಕಲಕತ್ತಾಗೆ ಹೋಗಲು ರೈಲು ಸಂಪರ್ಕ ಸಿಗದಿದ್ದುದರಿಂದ ಪುರಿಯಲ್ಲೇ ಒಂದು ವಾರ ಉಳಿಯ ಬೇಕಾಯಿತು. ಅದೂ ನಮಗೆ ಸುತ್ತಾಟಕ್ಕೆ ಅನುಕೂಲವಾಯಿತು.

ಮುಂದೆ ಪಶ್ಚಿಮ ಬಂಗಾಳದ ರಾಜಧಾನಿಯಾದ ಕಲಕತ್ತಾಗೆ ಹಾದಿ ಸವೆಸಿದ್ದಾಯ್ತು. ಮೊದಲಿಗೆ ಅಲ್ಲಿಯ ಜನಜಂಗುಳಿ ನೋಡಿ ಧಿಗ್ಭ್ರಮೆಯಾಗಿತ್ತು. ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಬ್ರಿಟಿಷರು ವ್ಯಾಪಾರಕ್ಕೆ ಕಾಲಿಟ್ಟು ಸುಮಾರು ೨೦೦ ವರ್ಷ ನಮ್ಮನ್ನಾಳಿದ ಚಾರಿತ್ರಿಕ ಊರನ್ನು ವಿಸ್ಮಯದಿಂದ ನೋಡಿದೆವು. ವಿಕ್ಟೋರಿಯ ಮೆಮೊರಿಯಲ್, ಹೌರಾ ಸೇತುವೆ, ನ್ಯಾಷನಲ್ ಲೈಬ್ರರಿ, ಎಂದು ಊರಿನ ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ, ದಕ್ಷಿಣೇಶ್ವರದಲ್ಲಿ ಹೂಗ್ಲಿ ನದಿಯ ದಂಡೆಯ ಮೇಲಿರುವ ಕಾಳಿ ಮಾತೆಯ ದರ್ಶನ ಪಡೆಯಲು ಹೊರಟೆವು. ಭವತಾರಿಣಿ ಎಂದೂ ಕರೆಯಲ್ಪಡುವ ರೌದ್ರ ಮುಖದ ಕಾಳಿಯ ದೇವಾಲಯದಲ್ಲಿ, ನಮ್ಮನ್ನು ನಾವು ಕಳ್ಳ ಕಾಕರಿಂದಲೂ ರಕ್ಷಿಸಿಕೊಳ್ಳಬೇಕಾಗಿತ್ತು. ಅಲ್ಲಿಂದ ಪ್ರಶಾಂತ ಸ್ಥಳವಾದ ಬೇಲೂರಿನ ರಾಮಕೃಷ್ಣ, ಶಾರದಾದೇವಿಯ ಮಠವನ್ನು ಸಂದರ್ಶಿಸಿ ಬಂದೆವು.

ಕಲಕತ್ತಾ ಎಂದರೆ ರವೀಂದ್ರನಾಥ ಟಾಗೋರರನ್ನು ಮರೆಯಲುಂಟೇ, ಅವರ ಶಾಂತಿನಿಕೇತನಕ್ಕೂ ಭೇಟಿ ನೀಡಿದ್ದಾಯಿತು. ಅಲ್ಲಿಯ ಮರಗಳ ಸುತ್ತಲೂ ನಡೆಯುತ್ತಿದ್ದ ತರಗತಿಗಳನ್ನು (ಅದುವರೆಗೂ ಕೇಳಿ ತಿಳಿದಿದ್ದ) ನೋಡಿ ಖುಷಿಯಾಯಿತು. ವಸಂತೋತ್ಸವದ ರವೀಂದ್ರ ಸಂಗೀತವನ್ನು ಕೇಳುವ ಅವಕಾಶವೂ ಒದಗಿತು. ಎಲ್ಲಾ ಸವಿ ನೆನಪುಗಳೊಂದಿಗೆ ನಮ್ಮ ಪಯಣ ಕಾಶಿ ಕ್ಷೇತ್ರಕ್ಕೆ ಮುಂದುವರೆಯಿತು.

ಹಿಂದೂಗಳ ಪವಿತ್ರ ಕ್ಷೇತ್ರವಾದ ಕಾಶಿಯನ್ನು, ವಾರಣಾಸಿ, ಬನಾರಸ್ ಎಂದೂ ಕರೆಯುತ್ತಾರೆ. ಜೀವನದ ಸಂಧ್ಯೆಯಲ್ಲಿ ಕಾಶಿಗೆ ಪಯಣಿಸುತ್ತಿದ್ದ ಹಿರಿಯರು, ತಮ್ಮ ಜೀವನದ ಸಾರ್ಥಕತೆಯನ್ನು ಕಾಣುತ್ತಿದ್ದರು. ನಮಗೆ ನಮ್ಮ ಚಿಕ್ಕ ವಯಸ್ಸಿನಲ್ಲೇ ಕಾಶಿ ವಿಶ್ವನಾಥನ ದರ್ಶನವಾಗುತ್ತಿದ್ದುದು ಅವರಿಗೆ ತುಂಬಾ ಸಂತೋಷ ತಂದಿತ್ತು. ಇಡೀ ದೋಣಿಯ ತುಂಬಾ ನಮ್ಮವರೇ ತುಂಬಿಕೊಂಡು ಗಂಗಾ ಸ್ನಾನ ಮಾಡಿ, ಪೂಜೆ ಒಬ್ಬರಿಗೊಬ್ಬರು ಅಡಕಲೆ ಕೊಟ್ಟುಕೊಂಡು, ಆ ಗದ್ದಲ ತುಂಬಿದ ಓಣಿಯಲ್ಲೇ ಸಾಗಿ ವಿಶ್ವೇಶ್ವರನ ದರ್ಶನ ಮಾಡಿದೆವು. Educational tour ಅಂದ್ರೂ ನಮ್ಮೆಲ್ಲರ ಭಕ್ತಿ ಭಾವ ತುಂಬಿ ಬಂದಿತ್ತು. ಒಂದು ಸಣ್ಣ ತೊಟ್ಟಿಯಂತಿದ್ದರಲ್ಲೇ ಪುಟ್ಟ ಶಿವಲಿಂಗವನ್ನು ಕಂಡಾಗ ನಿರಾಸೆಯಾದದ್ದೂ ಉಂಟು. ದಾರಿಯುದ್ದಕ್ಕೂ ನಮ್ಮ ವ್ಯಾಪಾರ ಭರದಿಂದ ಸಾಗಿತ್ತು. ಅನ್ನಪೂರ್ಣೇಶ್ವರಿ, ಕಾಳ ಭೈರವ ಮುಂತಾದ ದೇವಾಲಯಗಳಿಗೂ ಭೇಟಿ ನೀಡಿದೆವು. ರಸ್ತೆಯಲ್ಲಿ ದೊಡ್ಡ ದೊಡ್ಡ ಬಾಣಲೆಗಳಲ್ಲಿ ಗಟ್ಟಿಯಾದ ರುಚಿಯಾದ ಹಾಲನ್ನು ಕಾಯಿಸಿ ಸಣ್ಣ ಸಣ್ಣ ಮಡಕೆಗಳಲ್ಲಿ ದಪ್ಪ ಕೆನೆಯೊಂದಿಗೆ ಮಾರುತ್ತಿದ್ದುದನ್ನು ನೋಡಿ ನಮಗೆಲ್ಲಾ ಆಶ್ಚರ್ಯ. ಸಿಕ್ಕಿದ್ದೇ ಸಾಕು ಅಂತ ನಾವೆಲ್ಲರೂ ಕುಡಿದಿದ್ದೇ ಕುಡಿದಿದ್ದು.

ಸಂಜೆಗೆ, ಪಂಡಿತ ಮದನ ಮೋಹನ ಮಾಳವೀಯ ಸ್ಥಾಪಿಸಿದ ಬೆನಾರಸ್ ಹಿಂದೂ ವಿಶ್ವವಿದ್ಯಾಲಯ, ತುಳಸೀ ಮಾನಸ ಮಂದಿರ, ಮುಂತಾದುವನ್ನು ನೋಡಿ ಸಂಭ್ರಮ ಪಟ್ಟೆವು. ತುಲಸೀ ಮಾನಸ ಮಂದಿರದಲ್ಲಿ ಸುತ್ತಲೂ ವರ್ಣರಂಜಿತ ರಾಮಾಯಣದ ಚಿತ್ರಗಳನ್ನು ನೋಡಿ ಮನಸ್ಸು ಮುದಗೊಂಡಿತು.

ಮಾರನೆಯ ದಿನ ಸುಮಾರು ೧೦ ಕಿ.ಮೀ. ದೂರದಲ್ಲಿರುವ ಸಾರನಾಥಕ್ಕೆ ಹೋದೆವು. ಬೋಧಗಯಾದಲ್ಲಿ ಬುದ್ಧನಿಗೆ ಜ್ಞಾನೋದಯವಾದ ನಂತರ, ಇಲ್ಲಿ ಅವನ ಮೊದಲ ಪ್ರವಚನ ನಡೆದಿತ್ತಂತೆ. ಹಾಗಾಗಿ ಆ ಸ್ಥಳ ಬೌದ್ಧರ ತೀರ್ಥಕ್ಷೇತ್ರವೂ ಆಗಿದೆ. ಅಶೋಕ ಚಕ್ರವರ್ತಿ ಅಲ್ಲಿಯ ಬೃಹತ್ ಸ್ತೂಪವನ್ನು ಕಟ್ಟಿಸಿದನೆಂದು ಪ್ರತೀತಿ.

ಕಾಶಿಯಿಂದ ಮುಂದಿನ ಪಯಣ ಭಾರತದ ರಾಜಧಾನಿ ದೆಹಲಿಗೆ. ದೆಹಲಿ, ಅಮೃತಸರ, ಕಾಶ್ಮೀರ ಮತ್ತು ಬದರಿನಾಥದ ಅನುಭವ ಕಥನ ಇನ್ನೂ ದೀರ್ಘವಾದುದರಿಂದ ಮುಂದಿನ ಕಂತಿನಲ್ಲಿ ಹಂಚಿಕೊಳ್ಳುತ್ತೇನೆ. ನಮಸ್ಕಾರ.

# ತಮಿಳು ಬಲು ಪುರಾತನ ಭಾಷೆಯೇ?



✍ **ಡಾ. ಮಂಜುನಾಥ್**

ಹೌದು ಪುರಾತನ ಭಾಷೆ ಸರಿ. ಆದರೆ ಈಗ ತಮಿಳಿಗರು ಹೇಳುವಂತೆ ಅದರಲ್ಲಿ ಯಾವ ಪದವೂ ಇಲ್ಲ ಎನ್ನುವುದು ಸರಿಯಲ್ಲ.

ಈಗ ನಾವು ತಮಿಳು ಎಂದು ಕರೆಯುವ ಮಾತು, 14ನೆಯ ಶತಮಾನದ ಹಿಂದೆ "ಅರವ" ಎಂದು ಕರೆಯಲ್ಪಡುತ್ತಿತ್ತು. ಅರವ ಎಂದರೆ "ಕೇಳಲು ಸವಿಯಾದ ಮಾತು" ಎಂದು. "ರವ" ಎನ್ನುವುದೂ ಸಂಸ್ಕೃತ ಪದ.

"ತಮಿಳು" ಎನ್ನುವುದು 'ದ್ರುಮಿಳ', 'ದ್ರುವಿಡ' ದಿಂದ ಬಂದಿದ್ದು. 'ದ್ರುವಿ' ಎಂದರೆ ಕರಗಿಸಿ ನೀರಾಗಿ ಮಾಡುವುದು ಎಂದು. ಹಿಂದೆ ಈ ಬುಡಕಟ್ಟಿನ ಮಂದಿಗೆ ಲೋಹಗಳನ್ನು ಕರಗಿಸಿ ಅದರಿಂದ ಆಯುಧ, ಪ್ರತಿಮೆ, ಪಾತ್ರೆಗಳನ್ನು ಮಾಡುವ ಕಲೆ ಸಿದ್ದಿಸಿತ್ತು. ಇಂದು ಕೂಡ ದಕ್ಷಿಣದಲ್ಲಿಯೇ ಈ ಲೋಹ ಕಲೆ ಈಗಲೂ ನಡೆಯುತ್ತಿರುವುದು. ಸಂಸ್ಕೃತದಲ್ಲಿ ಬೇರೆ ಬೇರೆ ಲೋಹಗಳಿಗೆ ಬೇರೆ ಬೇರೆ ಹೆಸರೇ ಇರಲಿಲ್ಲ. ವೇದ ಭಾಷೆಯಲ್ಲಿ "ಆಯಸ" ಎಂದರೆ ಚಿನ್ನವೂ ಆಗಬಹುದು, ಕಬ್ಬಿಣವೂ ಆಗಬಹುದು. ಆಮೇಲೆ 'ಒಳ್ಳೆಯ ಬಣ್ಣ' ಎನ್ನುವುದರಿಂದ 'ಸುವರ್ಣ' ಎಂದು ಬಂದಿದ್ದು. 'ರಜತ' ವೂ ಕೂಡ ಹಾಗೆಯೇ. ದಕ್ಷಿಣದ ಭಾಷೆಯಲ್ಲಿ ಸೀಸ, ತವರು, ತಾವ್ರು..... ಮುಂತಾದ ಲೋಹಗಳಿವೆ. 'ತಾಮ್ರ' ಎನ್ನುವುದು 'ತಾಮರೈ' ಯ ಬಣ್ಣದ್ದು ಎಂದು.

ಈಗ ತಮಿಳಿನಲ್ಲಿ 'ಅಧಿಕಂ', 'ಸಂಬಂಧಿ', 'ಚೆಟ್ಟರ್', 'ಪಡಿಕ್ಕಿರುದು', 'ವಾಚಿಕ್ಕಿರುದು ಎಲ್ಲವೂ ಸಾಮಾನ್ಯವಾಗಿ ಬಳಸಲಾಗುತ್ತಿದೆ. ಇದ್ಯಾವುದೂ ತಮಿಳು ಮಾತಲ್ಲ. ಗಂಡನಿಗೆ 'ಪುರುಷನ್', ಮದುವೆಗೆ 'ಕಲ್ಯಾಣಂ', 'ಕನ್ನಾಲ್' ಎನ್ನುವುದೇ ತಮಿಳರಿಗೆ ಒಗ್ಗಿದ ಮಾತು. ಯಾರೂ ಇದರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇದು ತಮಿಳಿನ ಮಾತೇ ಎಂದು ಹೇಳಿ ಬಿಡುತ್ತಾರೆ.

ಎರಡು ಬೇರೆ ಬೇರೆ ಬುಡಕಟ್ಟಿನ ಮಂದಿ ಹತ್ತಿರ ಬಂದಾಗ ಕೊಡುವುದು -ತರುವುದು ನಡೆದೇ ನಡೆಯುತ್ತದೆ. ಹಲವಾರು ದ್ರಾವಿಡ ಮಾತುಗಳನ್ನು ಸಂಸ್ಕೃತ ಎರವಲು ತೆಗೆದುಕೊಂಡಿದೆ. ಪುರ, ಮಲಯ, ಮೀನು, ನೀರು, ಪೂಜಾ, ಸಿಮ್ಮ, ದಕ್ಷಿಣ ಇನ್ನೂ ಹಲವಾರು ಪದಗಳನ್ನು ಸಂಸ್ಕೃತ ಎರವಲು ತೆಗೆದುಕೊಂಡರೆ, ಎರವಲು ಕೊಂಡಾಗ ಆ ಪದವನ್ನು ತಮ್ಮದಾಗಿಯೇ ಮಾಡಿಕೊಳ್ಳುವುದಕ್ಕಾಗಿ ಆ ಪದದ ಉಚ್ಚಾರಣೆಯನ್ನೂ ಮಾರ್ಪಾಡು ಮಾಡಿಕೊಳ್ಳುತ್ತಾರೆ. ಈಗ ನಿಟ್ಟಿನ ಮಾತು ಬಂದಾಗ 'ತೆಂಗು', 'ತೆಂಗಿನ ಕಣ' ಎಂದರೆ ತೆಂಗು ಬೆಳೆಯುವ ಜಾಗ ಎಂದು. ಆ 'ತೆಂಕಣ', 'ದೆಂಕಣ'ವಾಗಿ 'ದಕ್ಷಿಣ'ವಾಗಿದೆ. ಏಕೆಂದರೆ ಸಂಸ್ಕೃತದವರಿಗೆ ಮಹಾಪ್ರಾಣ ಹಾಗೂ 'ಕ್ಷ' ಬಹಳ ಪ್ರಿಯವಾದದ್ದು. ದೆಂಕಣದಿಂದಲೇ ದಕ್ಕನ್, ಡೆಕ್ಕನ್ ಬಂದಿರುವುದು.

ಸಿಮ್ಮ ವೆಂಬ ಪ್ರಾಣಿಯನ್ನು ಮೊದಲು ನೋಡಿದಾಗ ಅದನ್ನು ವೇದದ ಜನ "ಕೇಸರಿ" ಎಂದರು. ಅಂದರೆ ಬಹು ಕೂದಲಿರುವ ಪ್ರಾಣಿ ಎಂದು. ಆದರೆ ಇಲ್ಲಿಯೇ ಇರುವ ಮಂದಿ ಅದನ್ನು ಸಿಮ್ಮ ಎಂದು ಕರೆಯುತ್ತಿದ್ದುದರಿಂದ ಅದು "ಸಿಂಹ"ವಾಯಿತು.

ಈಗ ಶಾಲೆಗಳಲ್ಲಿ ಕಲಿಸುತ್ತಿರುವ ಕನ್ನಡ, ಕನ್ನಡವೇ ಅಲ್ಲ. ಗಾಳಿಗೆ, ಅನಿಲ , ಉಪ್ಪಿಗೆ ಲವಣ ಎಂದು ಕಲಿಸುವ ಮಾತು ಯಾರೂ ಆಡುವ ಮಾತಲ್ಲ. ಬರೆಯುವವರ ಮಾತೇ ಮಾತು, ಆಡುವ ಮಾತು, "ಗ್ರಾಮ್ಯ" ಎಂದಾಗಿ ನಗುಪಾಟಲಾಗಿದೆ.

ತಮಿಳಿಗರು ತಮ್ಮದೇ ಒಂದು ಮೂಲ ಬೇರಿದೆ ಎನ್ನುವುದು 'ಅಭಿಮಾನ' ದ 'ಹೆಮ್ಮೆ'ಯ ಮಾತು.

'ಹೆಮ್ಮೆ' (ಹಿರಿಮೆ) ಬೇಕೇ ಬೇಕು. ಅದೇ ನಾಡಿನ ಬೇರು. ತಮಿಳಿಗರು ತಮ್ಮ ಭಾಷೆ ಅನೂಚಾನ ಪ್ರಾಚೀನ ಎಂದು ಹೇಳಿಕೊಳ್ಳುವುದು, ತಮ್ಮತನವನ್ನು ಉಳಿಸಿಕೊಳ್ಳುವುದಕ್ಕಾಗಿ.

ಕನ್ನಡಿಗರಿಗೆ ಈ ಬಗೆಯ ಹೆಮ್ಮೆ ಕಡಿಮೆ ಆಗಿದೆ.

# MATRIMONIAL

Alliance Invited for a Smarta, Kannada Brahmin boy, DOB: 27th May 1992, Gotra: Kashyapa, Rashi: Meena, Nakshatra: Uttarabhadra, Qualification: B.E. Production VJTI- Mumbai working at Easyserve Marketing, Operation Head in Mumbai.
Contact: Mrs. Sriprabha Sathyanarayana
Contact No.: 9870494853



# ಬೆತ್ತಲೆ

(ಉಮಾ ರಾವ್ ಕಥೆಗಳು)

✍ **ಉಮಾ ರಾವ್**

"ಎಂಟನೂರು ರೂಪಾಯಿ ಪಗಾರ, ಜೊತೆಗೆ ಗೋವಂಡಿಯಿಂದ ರೈಲ್ವೆ ಪಾಸು. ದಿನಕ್ಕೆ ಎರಡು ಬಾರಿ ಚಹಾ. ಸೋಮವಾರ ರಜಾ. ಇವತ್ತಿಂದಾನೇ ಶುರು ಮಾಡ್ತೀಯಾ?"

ಸೇಠ್ ಮಾತುಗಳನ್ನು ಕೇಳಿ ದಿಲೀಪನಿಗೆ ಕುಣಿಯುವಂತಾಯಿತು. ತಕ್ಷಣ ನೆನಪಾದದ್ದು ಜೋಪಡಿಯ ಮುಂದೆ ತನಗಾಗಿ ಕಾದು ಕೂತಿರುವ ಆಯಿಯ ಮುಖ. ಗುಳಿಬಿದ್ದ ಕಣ್ಣುಗಳು. ಬಾಯಲ್ಲಿ ಆಡುತ್ತಲೇ ಇರುವ ತಂಬಾಕು. ಸಣಕಲು ಮೈಗೆ ಸುತ್ತಿದ ಬಣ್ಣಹೋದ ಜಾಯಿಂಟ್ ಸೀರೆ.

"ಏನು ಮಿಕಿಮಿಕಿ ನೋಡ್ತಾ ನಿಂತಿದೀ. ಕೆಲಸ ಶುರುಮಾಡು. ದಿನ ಒಂಬತ್ತಕ್ಕೆ ದೊಡ್ಡ ಬಾಗಿಲು ತೆಗೆಯುತ್ತಲೂ ಜನ ಬರೋಕೆ ಶುರು ಮಾಡ್ತಾರೆ. ನೀನು ಸರೀಗೆ ಎಂಟು ಗಂಟೆಗೆ ಇಲ್ಲಿದ್ದು, ಶೋ ವಿಂಡೋ ಬೊಂಬೆಗಳಿಗೆ ನೀಟಾಗಿ ಅಲಂಕಾರ ಮಾಡಿ ತಂದಿಟ್ಟು ಬಿಟ್ಟಿರಬೇಕು. ದಿನಾ ಬೇರೆ ಬೇರೆ ಡ್ರೆಸ್. ಜೊತೆಗೆ ಗೋಡೌನ್ ವಿಂಗಡಣೆ ನೋಡ್ಕೋ, ಧೋಂಡ್ಯಾ, ಈ ಛೋಕ್ರಾಗೆ ಗೋಡೌನಿಗೆ ಕಕ್ಕೊಂಡು ಹೋಗಿ ಕೆಲಸ ತೋರಿಸು"

ಗಾಜುಗಳನ್ನು ಒರೆಸುತ್ತಿದ್ದ ಧೋಂಡ್ಯಾ ಬಟ್ಟೆ ಅಲ್ಲೇ ಹಾಕಿ ಇವನ ಪಕ್ಕ ಬಂದು ನಿಂತ.

"ಸೇಲ್ಸ್‌ಮನ್ ಕೆಲಸ ಅಂಡ್ಕೊಂಡೆ ಸಾಬ್..." ದಿಲೀಪ ಹಿಂಜರಿ ಯುತ್ತಲೇ ನುಡಿದ.

"ಅದ್ವೇಗೆ... ಯಾರು ಹೇಳಿದ್ದು? ಮುಖ ನೋಡ್ಕೊಂಡಿದೀಯ ಕನ್ನಡೀರಿ. ನಿನ್ನನ್ನು ಸೇಲ್ಸ್‌ಮನ್ ಮಾಡಿಬಿಟ್ರೆ ನಮ್ಮಂಗಡಿ ಗಿರಾಕಿಗಳೆಲ್ಲಾ ಹೋಗ್ತಾರೆ." ಹೆದರಿಕೊಂಡು ಓಡಿ ಹೋಗ್ತಾರೆ.

ದಿಲೀಪ ತಿರುಗಿದಂತೆ ಆ ಕ್ಷಣ ಅಂಗಡಿಯ ದೀಪಗಳೆಲ್ಲಾ ಹತ್ತಿಕೊಂಡು ಸುತ್ತ ಇದ್ದ ಹತ್ತಾರು ಕನ್ನಡಿಗಳಲ್ಲಿ ಅವನ ಮುಖ ಮೂಡಿತು. ಮೊಡವೆ ತುಂಬಲ ಚರ್ಮ, ಹರಿದ ತುಟಿ, ತೆಳುಗೂದಲು. ಧೋಂಡ್ಯಾ ಇವನ ಕೈ ಹಿಡಿದೆಳೆಯು ಚಲೋ ಅಂದ, ದಿಲೀಪ ಮಾತಿಲ್ಲದೆ ಅವನನ್ನು ಹಿಂಬಾಲಿಸಿದ. ಗಲ್ಲಾ ಪಟ್ ಮೇಲಿದ್ದ ಶ್ರೀಕೃಷ್ಣನಿಗೆ ಸೇರು ಹಚ್ಚಿದ ಊದುಕಡ್ಡಿಯ ಪರಿಮಳ ಅವನ ಹಿಂದೆಯೇ ಬಂದಿತು.

****

ಮೆಟ್ಟಿಲಿಳಿದು ನೆಲಮಾಳಿಗೆಗೆ ಬಂದಂತೆ ಅಲ್ಲಿ ಕತ್ತಲು ತುಂಬಿತ್ತು. ಎಲ್ಲೆಲ್ಲೂ ಹೊಸ ಬಟ್ಟೆಯ ವಿಚಿತ್ರ ಘಾಟು. ದೀಪ ಹಾಕಿದ ತಕ್ಷಣ ದಿಲೀಪನಿಗೆ ತನ್ನ ಕೆಲಸದ ಅರಿವಾಯಿತು. ಎಲ್ಲೆಲ್ಲೂ ಪೇರಿಸಿಟ್ಟಿದ್ದ ರೆಡಿಮೇಡ್ ಬಟ್ಟೆಗಳು, ಸೀರೆಗಳು, ದುಪಟ್ಟಾಗಳು ನಡುವೆ ಬೆತ್ತಲಾಗಿ ನಿಂತಿದ್ದ ಮೂರು ಬೊಂಬೆಗಳು. ಅದರಲ್ಲಿ ಒಬ್ಬಳು ಕಪ್ಪಾದರೆ, ಇನ್ನಿಬ್ಬರು ಗುಲಾಬಿ ಬಣ್ಣದವರು. ಒಂದು ಬೊಂಬೆ ಸೊಂಟದವರೆಗೆ ಮಾತ್ರ. ಪಕ್ಷಕ್ಷ ತಿರುಗಿದ ಮುಖ, ಧೋಂಡ್ಯಾ ಬಟ್ಟೆಗಳ ನಡುವೆ ಕೈಹಾಕಿ ಒಂದು ಸೀರೆ. ಒಂದು ಘಾಗ್ರಾ-ಚೋಲಿ, ಒಂದು ಕಪ್ಪು ಬ್ರಾ ದಿಲೀಪನ ಕೈಲಿಟ್ಟು ನಿಂತಿದ್ದ ಬೊಂಬೆಗಳನ್ನು ಪಟಪಟನೆ ಮೂರು ಭಾಗ ಮಾಡಿದ. "ಈಗ ಇವರಿಗೆ ಡ್ರೆಸ್ ಮಾಡೋದು ಸುಲಭಾ, ಸದ್ಯ ಕಪ್ಪು ಮುಖದವಳಿಗೆ ಕೆಂಪು ಮೈ ಜೋಡಿಸಬೇಡ ಹುಷಾರು" ಎಂದು ಕಣ್ಣು ಹೊಡೆದು ಅಲ್ಲಿಂದ ಮರೆಯಾದ.

ಕೈಯಲ್ಲಿ ಜಾರುತ್ತಿದ್ದ ಸೀರೆ ಹಿಡಿದು ಒದ್ದಾಡುತ್ತಿದ್ದ ದಿಲೀಪನಿಗೆ ಅಲ್ಲಿ ಕಸ ಗುಡಿ ಸಲು ಬಂದ ರುಕ್ಕೂಬಾಯಿ "ಮೊದಲನೇ ದಿನಾನಾ" ಎಂದು ಕೀಟಲೆ ಮಾಡುತ್ತಲೇ ಸಹಾಯ ಮಾಡಿದಳು. ಅಷ್ಟು ಹೊತ್ತಿಗೆ ತಲೆ ಸೂರಿನ ಪುಟ್ಟ ಬಾಗಿಲು ತೆಗೆದುಕೊಂಡು ಅದರೊಳಗೆ ಧೋಂಡ್ಯಾ ಮುಖ ಕಂಡು ಬಂತು.

"ರೆಡೀನಾ, ಅಂಗಡಿ ಬಾಗಿಲು ತೆಗೆಯೋ ಹೊತ್ತಾಯ್ತು"

ಫುಟಾಣಿ ಬಟ್ಟಲಲ್ಲಿ ರುಕ್ಕೂ ತಂದುಕೊಟ್ಟ ಚಹಾ ಕುಡಿಯುತ್ತಲೇ ಬಿಡುವಿಲ್ಲದೆ ಕೆಲಸ. ಮೇಲಿಂದ ಪದೇ ಪದೇ ಕೂಗು. ತೀಸ್ ನಂಬರ್ ಬ್ಲ್ಯಾಕ್ ಪೆಟ್ಟಿಕೋಟ್. ಆ್ಯಂಕರ್ ಫ್ರೀ ಸೈಜು, ಜೂಲಿಯೆಟ್ ಘಾರಿ ಫ್ರಂಟ್ ಓಪನ್, ವಿಐಪಿ ಸೂಪರ್ ಡಿಲಕ್ಸ್.

ತಲೆಮೇಲಿನ ಕಿಂಡಿಯಿಂದ ಪ್ಯಾಕೆಟ್ಟುಗಳು ಹೋಗುತ್ತಿದ್ದವು. ಬೇಡವಾದದ್ದು ಧಬಧಬನೆ ಕೆಳಗೆ ಬೀಳುತ್ತಿದ್ದುವು. ಕಿಟಿಕಿಯಿಲ್ಲದ ರೂಮಿನಲ್ಲಿದ್ದ ಏಕಮಾತ್ರ ಫ್ಯಾನನ್ನು ಮ್ಯಾನೇಜರ್ ಶೂಪರ್‌ವೈಜ್ ಮಾಡಲು ಬಂದಾಗ ಅಷ್ಟು ಹೊತ್ತು ಮಾತ್ರ ಹಾಕಿರುತ್ತಿದ್ದರು. ದಿನವಿಡೀ ಬೆಲೆ ಏರುತ್ತಲೇ ಇತ್ತು, ಯಾರೋ ಒಬ್ಬರು ಶೋ ಎಂಡೋ ಬೊಂಬೆಗೆ ತೊಡಿಸಿದ್ದ ತತ್ವಗಳೇ ಬೇಕೆಂದು ಪಟ್ಟು ಹಿಡಿದಾಗ ಅದಕ್ಕೆ ಮತ್ತೆ ಅಲಂಕಾರ ಮಾಡುವ ಕೆಲಸವೂ ಬಿತ್ತು.

***

ಮನೆ ಹತ್ತಿರವಾದಂತೆ ಕೆಲಸ ಸಿಕ್ಕ ಖುಷಿಯ ಜೊತೆ ಆತಂಕ. ಆಯಿಗೆ ಏನೂಂತ ಹೇಳೋದು. ಚಿಕ್ಕಂದಿನಿಂದ ನಿನ್ನ ಬಾಬಾನ ಹಾಗಾಗಬೇಡ. ಬೆಳೆದು ದೊಡ್ಡನಾಗಿ ಒಳ್ಳೆ ಕೆಲಸಕ್ಕೆ ಸೇರಿಕೋ ಎಂದು ಪದೇ ಪದೇ ಹೇಳುತ್ತಿದ್ದಳು ಆಯಿ. ಅವನಿಗೆ ವಾಬಾನ ನೋಡಿದ ನೆನಪಿರಲಿಲ್ಲ. ಬಾಬಾ ಹೇಗಿದ್ದ ಎಂದು ಅವನ ಆಯಿ ಎಂದೂ ಅವನಿಗೆ ತಿಳಿಸಿರಲಿಲ್ಲ.

ಆಯಿ, ಬೇರೆ ಮನೆಗೆಲಸದವರಂತಿರಲಿಲ್ಲ. ಎಷ್ಟೇ ಕಷ್ಟವಿರಲಿ, ಸಾಲ ಕೇಳುತ್ತಿರಲಿಲ್ಲ. ದೀಪಾವಳಿ ಸಮಯದಲ್ಲಿ ಕೂಡ ಕೆಲಸ ಮಾಡುವ ಮನೆಗಳಲ್ಲಿ ರಾಶಿ ರಾಶಿ ಬಿದ್ದಿರುತ್ತಿದ್ದ ಪಟಾಕಿಗಳಲ್ಲಿ ಒಂದೆರಡನ್ನು ಇವನಿಗಾಗಿ ಎತ್ತಿಕೊಂಡು ಬರುತ್ತಿರಲಿಲ್ಲ. ಇವನು ಬೆಳೆದದ್ದೇ ಕೆಲಸದ ಮನೆಯ ಒಡತಿಯರು ಕೊಡುತ್ತಿದ್ದ ಹಿಡಿ ಮುರಿದ ಕಪ್ಪುಗಳಲ್ಲಿ ಚಹಾ ಕುಡಿದು. ಅವರ ಮಕ್ಕಳ ಚಿಕ್ಕದಾದ ಶೂಗಳು, ಬಣ್ಣ ಹೋದ ಶರಟುಗಳು, ಫ್ಯಾಶನ್ ಹಳೇದಾಯ್ತು ಎಂದು ಎಸೆದ ಜೀನ್ಸ್‌ಗಳನ್ನು ತೊಟ್ಟು, ಆಯಿ ಹೊಸಬಟ್ಟೆ ಕೊಡಿಸುತ್ತಿದ್ದುದು ದೀಪಾವಳಿಯಲ್ಲಿ ಮಾತ್ರ.

ಆಯಿಗೇನು ಗೊತ್ತು ಈ ಕೆಲಸ ಸಿಗುವುದೂ ಎಷ್ಟು ಕಷ್ಟವೆಂದು. ಬೆತ್ತಲೆ ಬೊಂಬೆಗಳಿಗೆ ಸೀರೆ ಉಡಿಸುವ ಕೆಲಸ. ಅದಕ್ಕೆ ೮೦೦ ರೂಪಾಯಿ ಪಗಾರು, ದಿನಕ್ಕೊಂದು ಬಾರಿ ಪುಕ್ಕಟೆ ಚಹಾ.

****

ಶಬಾನಾ, ಸೈರಾ, ಸಲ್ಮಾ ಪಕ್ಕದ ಗಲ್ಲಿಯ ಬೀಡಿ ಅಂಗಡಿ ಇಸ್ಮಾಯಿಲ್‌ನ ಹದಿ ಹರೆಯದ ಹೆಣ್ಣು ಮಕ್ಕಳು. ಅವರು ಮೂರು ಜನವೂ ಬುರ್ಖಾ ಧರಿಸಿ ರಸ್ತೆಯಲ್ಲಿ ನಡೆದಂತೆ, ಅದರೊಳಗಿರುವುದು ಯಾರ್ಯಾರೆಂದು ಊಹಿಸಿ ಬೆಟ್ ಕಟ್ಟುತ್ತಾ, ಇವನು ಗೆಳೆಯರೊಂದಿಗೆ ಅವರನ್ನು ಮನೆವರೆಗೂ ಹಿಂಬಾಲಿಸುತ್ತಿದ್ದ ದಿನಗಳು.

"ದಿಲೀಪ್, ಎಲ್ಲಿ ಹೋದ್ಯೋ ಬೀದಿ ಅಲ್ಕೋತಾ ಹಾಳಾಗಿ ಹೋದ್ಯಾ ನಿಮ್ಮ ಬಾಬಾನ ಥರಾ..." ಆಯಿ ರಣಚಂಡಿಯಾಗುತ್ತಿದ್ದಳು.

ಕೆಲಸ ಹುಡುಕಲು ಆಯಿ ಒಪ್ಪಿದ್ದೂ ದಿಲೀಪನ ಮೀಸೆ ಮೊಳೆತು ಅವನು ಏಳನೇ ಕ್ಲಾಸಿನಲ್ಲೇ ಮೂರು ವರ್ಷ ಕೂತ ಮೇಲೆ. "ಹೋಗ್ಲಿ ಓದು ಬರಹ ಬರುತಲ್ಲಾ. ಒಂದು ಒಳ್ಳೆ ಕೆಲಸ ಹುಡುಕ್ಕೋ. ನಾನೂ ಎಷ್ಟು ದಿನಾಂತ ದುಡೀಲಿ. ಎಂದಿದ್ದಳು.

ಆಯಿಗೇಕೆ ಹೇಳಬೇಕು ತಾನೇನು ಮಾಡುತ್ತೇನೆಂದು. ದೊಡ್ಡ ಬಟ್ಟೆಯಂಗಡಿಯಲ್ಲಿ ಕೆಲಸ. ೮೦೦ ರೂಪಾಯಿ ಪಗಾರು ಅಷ್ಟು ಹೇಳಿದರೆ ಸಾಕು.

****

"ಆಯಿ, ಹೀನಾ ಡ್ರೆಸಸ್ ಎಂಡ್ ಸ್ಯಾರೀಸ್ ಎಷ್ಟು ದೊಡ್ಡ ಅಂಗಡಿ ಗೊತ್ತಾ ಗಿರ್‌ಗಾಮ್‌ನಲ್ಲಿ. ಸೀರೆ, ಬಟ್ಟೆ, ಪ್ಯಾಂಟು ಶರಟು, ಚುಡಿದಾರ್ ಎಲ್ಲಾ ಸಿಗುತ್ತೆ. ಎಷ್ಟೊಂದು ದೊಡ್ಡ ಕಾರುಗಳಲ್ಲಿ ಎಂಥಾ ದೊಡ್ಡ ಮನುಷ್ಯರು ಬರ್ತಾರೆ ಗೊತ್ತಾ? ಬೆಳಗಿನ ಹೊತ್ತೂ ಹೇಗೆ ದೀಪ ಉರೀತಿರುತ್ತೆ ಗೊತ್ತಾ... ಕಣ್ಣು ಕುಕ್ಕುತ್ತೆ!"

"ನಿಂಗೆ ಏನು ಕೆಲಸಾನೋ ಅಲ್ಲಿ..."

"ಸೇಲ್ಸ್‌ಮನ್ ಆಯಿ... ಬೇಗ ರೊಟ್ಟಿ ಮಾಡು ನಡಿ. ನಂಗೆ ಹಸಿವಾಗ್ತಿದೆ. ಬೆಳ ಗಾಗೆದ್ದು ೮ ಗಂಟೆಗೆ ಮುಂಚೆ ಅಂಗಡಿ ತಲುಪಿರಬೇಕು"

“ಹೌದಾ? ಸೇಲ್ಸ್‌ಮನ್ ಕೆಲಸ ಕೊಟ್ಟಿದಾರೇಂದ್ರೆ.. ನೀನು ಒಳ್ಳೆ ನಂಬಿಕೆ ಹುಡುಗಾಂತ ಸೇಠ್ ಗೂ ಅನ್ನಿಸಿರಬೇಕು... ಒಳ್ಳೇದಾಯ್ತು... ದೇವರು ದೊಡ್ಡವನು...”


****

ದಿಲೀಪನಿಗೆ ನಿಧಾನವಾಗಿ ಬೊಂಬೆಗಳಿಗೆ ಅಲಂಕಾರ ಉಂಟಾಗತೊಡಗಿತು. ಮೊದಲು ಅವರಿಗೆಲ್ಲಾ ಒಂದೊಂದು ಹೆಸರಿಟ್ಟ, ಕಪ್ಪಗಿರುವವಳು ಕಾಜೋಲ್, ಗುಲಾಬಿ ಬಣ್ಣದವರು ಮಾಧುರಿ ಮೇಲ್ಮೈಮಾತ್ರ ಇದ್ದದ್ದು ಹೆಲೆನ್ ಅವರ ಸೊಬಗು ಹೆಚ್ಚಿಸಲು ಆಗಾಗ "ಸ್ಪೆಶಲ್ ಟಚ್" ಕೊಡುತ್ತಿದ್ದ. ಮಾಧುರಿಯ ಮೂಗಿಗೊಂದು ಫಳಫಳ ಹೊಳೆಯುವ ಮೂಗುಬಟ್ಟು, ಕಾಜೋಲ್ ಕಿವಿಯಲ್ಲಿ ಪ್ಲಾಸ್ಟಿಕ್ ಹೂ. ಹೆಲೆನ್‌ಗೆ ಲೇಸಿನ ಬ್ರಾ, ಒಂದೇ ಕಿವಿಗೆ ಲೋಲಕ್ಕು, ಆದರೆ, ಅದೇಕೊ ದಿಲೀಪನಿಗೆ ಕಾಜೋಲ್ ಕಂಡರೆ ಹೆಚ್ಚು ಮೆಚ್ಚುಗೆ. ಎಷ್ಟು ಆಗಾಗ ಅಂಗಡಿಯಲ್ಲಿ ಕೆಲಸ ಮಾಡುವ ಹುಡುಗ, ಹುಡುಗಿಯರು ಇದರ ಬಗ್ಗೆ ಚುಡಾಯಿಸುವುದೂ ಇತ್ತು.

***

ದಿನ ಕಳೆದಂತೆ ಅಲ್ಲಿ ಕೆಲಸ ಮಾಡುವವರೂ ಇವನಿಗೆ ಕೊಂಚ ಹತ್ತಿರವಾದು ಸ್ಪೆಶಲ್ ದುಪಟ್ಟಾ ಮತ್ತು ನೈಟಿ ಕೌಂಟರಿನಲ್ಲಿದ್ದ ಸೀಮಾ, ಜೆನ್ನಿ. ಜೀನ್ಸ್ ಸ್ಪೆಶಲಿಸ್ಟ್ ಪಿಂಕಿ ಶರಟು, ಪ್ಯಾಂಟು, ಟೈ ತೋರಿಸುತ್ತಿದ್ದ ಬಾಳಾ, ಶೇಖರ್, ಆಲ್ಟರೇಶನ್ ಟ್ರೈಲರ್ ವಾಲ್ಟರ್, ಚಾಯ್‌ವಾಲಾ ಕಿಶನ್ ಕಾಕಾ. ಅಲ್ಲದೆ ಅಲ್ಲಿನ ಖಡೂಸ್ ಸೂಪರ್ ವೈಜರ್ ಗಟ್ಟೂ. ಗಟ್ಟೂಗೆ ಏನೂ ಕೆಲಸ ಮಾಡದೆಯೇ, ಟ್ರಿಮ್ಮಾಗಿ ಅಲಂಕರಿಸಿ ಕೊಂಡು ಎಲ್ಲರ ಮೇಲೆ ಜಬರಸ್ತು ಮಾಡಿ, ತನ್ನಿಂದಲೇ ಈ ಅಂಗಡಿ ಸರಿಯಾಗಿ ನಡೆಯುತ್ತಿದೆ ಎಂದು ಸೋಗು ಹಾಕುವ ಗತ್ತಿತ್ತು. ಯಾವಾಗಲೂ ಅವನ ಕತ್ತಿನಲ್ಲಿ ಟೈ ಇರುತ್ತಿತ್ತು. ಹಾಗೂ ಬೆರಳಿಗೆ ದೊಡ್ಡ ಹಳದಿ ಕಲ್ಲಿನ ಉಂಗುರ, ಜೇಬಿಗೆ ಅಂಟಿಸಿದ್ದ ಸೂಪರ್‌ವೈಜರ್ ಫಲಕ.

# ವಿಶ್ವಪರಿಸರ ದಿನಾಚರಣೆ: ಒಂದು ಚಿಂತನೆ



**ಕುಂದೂರು ಅಶೋಕ್**

ಇನ್ನೇನು ಜೂನ್ 5 ಬಂದೇ ಬಿಟ್ಟಿತು. ತರಾತುರಿಯಲ್ಲಿ ನಾವೂ–ನೀವು ವಿಶ್ವಪರಿಸರ ದಿನಾಚರಣೆಯನ್ನು ಫೋಟೋಕ್ಕಾಗಿ, ಸ್ಟೇಟಸ್‌ಗಾಗಿ, ದಾಖಲೀಕರಣಕ್ಕಾಗಿ ಮನಸ್ಸಿದ್ದೋ, ಇಲ್ಲದೆಯೋ ಮಾಡೇ ಮಾಡುತ್ತೀವಿ!

ಪರಿಸರವನ್ನು ಬಿಟ್ಟು ಯಾರಾದರೂ ಬದುಕಲು ಸಾಧ್ಯವೇ? ಇಲ್ಲ. ಮನುಷ್ಯನೂ ಒಳಗೊಂಡಂತೆ ಸಕಲ ಜೀವಾತ್ಮಗಳಿಗೂ ಪರಿಸರ ಬೇಕೆ ಬೇಕು. ಭೂಮಿಯ ಮೇಲಿನ ಜೀವ ಹಾಗೂ ಸಸ್ಯ ವೈವಿಧ್ಯಗಳು ಮನುಷ್ಯನ ಬದುಕಿಗೆ ಪೂರಕವಾಗಿ ಅಸ್ತಿತ್ವದಲ್ಲಿವೆ. ಅವುಗಳನ್ನು ಬಳಸುತ್ತಲೇ ಮನುಷ್ಯ ತನ್ನ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಕಟ್ಟಿಕೊಂಡಿದ್ದಾನೆ.

ಹಾಗಾದರೆ, 'ಪರಿಸರ' ಎಂದರೇನು? ಎಂಬ ಪ್ರಶ್ನೆಗೆ ನಮಗೆ ಸಿಗುವ ಉತ್ತರ ನಮ್ಮ ಸುತ್ತಮುತ್ತ ಇರುವ ಬೆಟ್ಟ–ಗುಡ್ಡ, ನದಿ, ಸರೋವರ, ಕೆರೆ–ತೊರೆಗಳು ಸಮುದ್ರ–ಸಾಗರಗಳು, ಕಾಡು, ಅರಣ್ಯ ಅಲ್ಲಿರುವ ಪ್ರಾಣಿ–ಪಕ್ಷಿ ಮತ್ತು ಕೀಟಗಳು ಎನ್ನುತ್ತೇವೆ. ಮಾನವ ಇಂತಹ ಜೈವಿಕ ಆವರಣದೊಳಗೆ ಒಂದು ಸಾಂಸ್ಕೃತಿಕ ಪರಿಸರವನ್ನು ಕಟ್ಟಿಕೊಂಡು ಬದುಕುತ್ತಿದ್ದಾನೆ. ಕಾಡಿನಿಂದ ನಾಡಿಗೆ ಕಾಲಿಡುತ್ತಿದ್ದಂತೆಯೇ ಮನುಷ್ಯನ ನಾಗರೀಕತೆಯ ನಾಗಾಲೋಟಕ್ಕೆ ಪರಿಸರವೇ ಮೊದಲ ದಾಳಿಗೆ ತುತ್ತಾಗಿದ್ದು ದೌರ್ಭಾಗ್ಯ.

ಮಾನವನ ಮನೆ, ಸುಖ–ಸೌಲಭ್ಯಗಳು ಐಷಾರಾಮಿಯ ಹರಾಮಿ ಬದುಕಿಗೆ ಪರಿಸರ ನಲುಗಲು ಪ್ರಾರಂಭವಾಯಿತು. ನಮ್ಮ ಬೆಟ್ಟ–ಗುಡ್ಡಗಳು ಕಣ್ಮರೆಯಾಗತೊಡಗಿದವು. ಬೀಸುವ ಗಾಳಿ ದಿಕ್ಕು ಬದಲಿಸಿತು, ಹರಿಯುವ ನೀರು ಕಲುಷಿತಗೊಂಡಿತು, ಹಕ್ಕಿಗಳ ಚಿಲಿಪಿಲಿ ಕೇಳಿಸದಾಯಿತು, ಋತು ಚಕ್ರ ಬದಲಾಯಿತು, ಮಣ್ಣು ವಿಷವಾಗತೊಡಗಿತು, ಮನುಷ್ಯನ ಸಂಬಂಧಗಳೂ ಶಿಥಿಲವಾಗತೊಡಗಿದವು.

ಈ ಮಟ್ಟದಲ್ಲಿ ಪರಿಸರ ನಾಶವಾಗದ ಸಂದರ್ಭದಲ್ಲೂ ನಮ್ಮ ಪೂರ್ವಜರಿಗೆ ಪರಿಸರದ ಕುರಿತು ಅಪಾರ ಅಭಿಮಾನ, ಗೌರವ ಭಕ್ತಿಗಳು ಇದ್ದವು. ಪುರಾಣ ಕಾಲದಲ್ಲಿ ಶ್ರೀಕೃಷ್ಣ ಮತ್ತು ಗೋಪಾಲಕರ ನಡುವೆ ನಡೆದ ಸಂಭಾಷಣೆಯನ್ನು ಕೇಳಿ; ಒಮ್ಮೆ ಗೋಪಾಲಕರು ಮಳೆಯ ಒಡೆಯ ದೇವೇಂದ್ರನನ್ನು ಪೂಜಿಸಲು ಹೋಗುತ್ತಿರುತ್ತಾರೆ. ಆಗ ಶ್ರೀಕೃಷ್ಣ ಅವರನ್ನು ತಡೆದು; ಎಲೈ, ಗೋಪಾಲಕರೆ ನೀವೆಲ್ಲರೂ ಎಲ್ಲಿಗೆ ತೆರಳುತ್ತಿದ್ದೀರಿ ಎಂದು ಕೇಳಿದನು. ಅದಕ್ಕೆ ಗೋಪಾಲಕರು "ನಾವು ಮಳೆಯ ಒಡೆಯ ದೇವೇಂದ್ರನನ್ನು ಪೂಜಿಸಲು ಹೋಗುತ್ತಿದ್ದೇವೆ ಎಂದು ಉತ್ತರ ನೀಡಿದರು. ಅದಕ್ಕೆ ಶ್ರೀಕೃಷ್ಣ ಅವರನ್ನು ತಡೆದು ಈ ರೀತಿ ಹೇಳದನು. "ನೀವು ದೇವೇಂದ್ರನನ್ನು ಪೂಜಿಸುವುದು ಸರಿಯಲ್ಲ. ನಮಗೆ ನೆರಳು, ಹಣ್ಣು ನೀಡುವ ಮರಗಳನ್ನು ಪೂಜಿಸಿ, ಅನ್ನ ಕೊಡುವ ಭೂಮಿಯನ್ನು ಪೂಜಿಸಿ, ಹಾಲು ಕೊಡುವ ಹಸುವನ್ನು ಪೂಜಿಸಿ, ನೀರು ಕೊಡುವ ಯಮುನೆಯನ್ನು ಪೂಜಿಸಿ" ಎಂದು ಉಪದೇಶ ನೀಡುವ ಮೂಲಕ ಪುರಾಣ ಕಾಲದಲ್ಲೂ 'ಪರಿಸರ ಪ್ರಜ್ಞೆ' ಇತ್ತು ಎಂಬುದಕ್ಕೆ ಉದಾಹರಣೆಯಾಗಿದೆ. ಈಗ ನಾವು ಗಾಳಿ, ನೀರು, ಮಣ್ಣು ಕಲುಷಿತ ಮಾಡಿದಷ್ಟು ಆಗ ಮಾಡಿರಲಿಲ್ಲ! ಆದರೂ ನಮಗೆ ಆಶ್ರಯ ನೀಡಿರುವ ಭೂಮಿಗೆ ಎಂತಹ ಗೌರವವನ್ನು ನಮ್ಮ ಪೂರ್ವಜರು ಇಟ್ಟುಕೊಂಡಿದ್ದರು ಎಂಬುದು ಹೆಮ್ಮೆಯೆನಿಸುತ್ತದೆ.

"ಸಮುದ್ರವಸನೇ ದೇವಿ ಪರ್ವತಸ್ತನಮಂಡಲೆ ವಿಷ್ಣು ಪತ್ನಿ ನಮಸ್ತುಭ್ಯಂ, ಪಾದಸ್ಪರ್ಶಕ್ಷಮಸ್ವಮೇ" ಎಂಬ ಶ್ಲೋಕ ಈ ರೀತಿ ಹೇಳುತ್ತದೆ. ಸಮುದ್ರವನ್ನೇ ಬಟ್ಟೆಯನ್ನಾಗಿ ಧರಿಸಿರುವ ಬೆಟ್ಟ–ಗುಡ್ಡಗಳನ್ನು ಹೊಂದಿ ಶೋಭಿಸುತ್ತಿರುವ ವಿಷ್ಣುವಿನ ಪತ್ನಿಯೇ ಈ ಭೂಮಿ! ಬೆಳಗಾಗಿ ಎದ್ದು ನಿನ್ನನ್ನು ತುಳಿಯುತ್ತಿದ್ದೀನಿ ನನ್ನನ್ನು ಕ್ಷಮಿಸು ಎಂಬು ಮಾತು ಈ ಭೂಮಿಯನ್ನು ಹೆಣ್ಣಿಗೆ ಹೋಲಿಸಿ ಗೌರವ ನೀಡುತ್ತಿರುವುದು ನಮ್ಮ ಪರಂಪರಾಗತ ಸಂಸ್ಕೃತಿ. ಈಗಲೂ ನಮ್ಮ ಹಿರಿಯರು ಮನೆಯ ಮುಂದೆ ನಿಂತು ಕೈ–ಕಾಲು ಮುಖಕ್ಕೆ ನೀರನ್ನು ಎರಚಿಕೊಂಡು ಆಕಾಶವನ್ನೇ ಮೇಲೆ ನೋಡುತ್ತ ಒಳ್ಳೆಯದು ಮಾಡಪ್ಪ ಎಂದು ಆಕಾಶವನ್ನೇ 'ಅಪ್ಪ' ಎಂದು ಮೇಲೆ ನೋಡುತ್ತಾರೆ. ಭೂಮಿಯನ್ನು ಮುಟ್ಟಿ ಅಯ್ಯೋ 'ನನ್ನ ತಾಯಿ' ಎಂದು ಮಣ್ಣನ್ನು ಮುಟ್ಟಿ ನಮಸ್ಕರಿಸುವುದು ಪರಿಸರವನ್ನೇ ಇಡಿಯಾಗಿ ಆವರಿಸಿರುವ ನಮ್ಮೆಲ್ಲರನ್ನು ಹೊತ್ತಿರುವ ಭೂಮಿಗೆ ಕೊಡುವ ಒಂದು ದೊಡ್ಡ ಗೌರವವೆಂದರೆ ತಪ್ಪಾಗಲಾರದು.

ನಮ್ಮ ಜನಪದರುಗಳಲ್ಲೂ ಕೂಡ 'ಪರಿಸರ ಪ್ರಜ್ಞೆ' ಹಾಸುಹೊಕ್ಕಾಗಿತ್ತು ಎಂಬುದಕ್ಕೆ ಈ ಕೆಳಕಂಡ ಜನಪದ ಸಾಲುಗಳೇ ಸಾಕ್ಷಿ.

ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ. ಎಳ್ಳು ಜೀರಿಗೆ ಬೆಳೆಯೋಳಾ ಎಳ್ಳು–ಜೀರಿಗೆ ಬೆಳೆಯೋಳ ಭೂಮ್ತಾಯಿ. ಎದ್ದೊಂದು ಘಳಿಗೆ ನೆನೆದೇನ. ಎಂದು ಹಾಡಿರುವುದು ಮನುಷ್ಯ ಹುಟ್ಟಿದಾಕ್ಷಣ ಜೀರಿಗೆ ಅರೆದು ಕುಡಿಸೋದು ನಮ್ಮ ಪೂರ್ವಿಕರು ಮಾಡಿಕೊಂಡು ಬಂದಿರೋದು, ಜೀರಿಗೆ ಒಂದು ಜೀವದ ಸಂಕೇತ. ಸತ್ತ ನಂತರ ಎಳ್ಳು ನೀರು ತರ್ಪಣ ಬಿಡುವುದು ನಮ್ಮ ಸಂಪ್ರದಾಯ. ಹುಟ್ಟು–ಸಾವುಗಳ ನಡುವೆ ಈ ಭೂಮಿಯ ಮೇಲೆ ಅತ್ಯಂತ ಗೌರವದಿಂದ ಬದುಕುವುದು, ಪರಿಸರ ಹಾಳು ಮಾಡದೆ ಜೀವಿಸುವುದು ಪ್ರತಿಯೊಬ್ಬರ ಕರ್ತವ್ಯವಲ್ಲವೇ? ಬೆಳಗ್ಗೆ ಎದ್ದೊಡನೆ ಭೂಮಿಗೆ ನಮಸ್ಕರಿಸುವುದು, ಪ್ರಾರ್ಥಿಸುವುದು ನಮ್ಮ ಹಿರಿಯರ ಸಂಪ್ರದಾಯ ಮತ್ತು ಕರ್ತವ್ಯವೇ ಆಗಿತ್ತು. ಆದರೆ, ನಿಂತ ನೆಲವನ್ನೇ ಕಸಿಯುತ್ತಿರುವ, ವಿಷವುಣಿಸುತ್ತಿರುವ ನಮಗೆ ಭೂಮಿಯ ಮೇಲಿನ ಮರ–ಗಿಡಗಳು, ಪ್ರಾಣಿ–ಪಕ್ಷಿಗಳು,

ಬೆಟ್ಟ–ಗುಡ್ಡಗಳು, ಕೆರೆ–ತೊರೆಗಳು, ನದಿಗಳು, ಸಾಗರ–ಸಮುದ್ರಗಳ ಕುರಿತು ಕನಿಷ್ಠ ಕಾಳಜಿಯೂ ಇರದಿರುವುದು ಮುಂದಿನ ದುರಂತಕ್ಕೆ ಕಾರಣವಾಗಬಹುದು.

'ಅಯ್ಯೋ ಮನೆ ಒಳಗೂ ಬದುಕುವುದಕ್ಕೆ ಆಗ್ತಾ ಇಲ್ಲ. ಅಷ್ಟು ಸೆಖೆ, ಹೊಲಗದ್ದೆಗಳಲ್ಲಿ, ತೋಟಗಳಲ್ಲಿ ಮೈ ಉರಿಉರಿ ಅನಿಸುತ್ತೆ ಅಂತ ಹೇಳುವುದನ್ನು ಕೇಳಿದ್ದೀರಿ. ಇದಕ್ಕೆಲ್ಲಾ ಕಾರಣ ನಮ್ಮೆಲ್ಲರ ದುರಾಸೆ!

ನಮ್ಮ ಸುತ್ತಮುತ್ತ ಇರುವ ಗ್ರಾಮಗಳ ಗೋಮಾಳಗಳು, ನೆಡುತೋಪುಗಳು, ಬೆಟ್ಟ–ಗುಡ್ಡಗಳನ್ನು ನಮಗೇ ಸೇರಿದ್ದು ಎಂದು ಬೇಲಿ ಹಾಕಿಕೊಂಡೆವು. ಅಲ್ಲಿದ್ದ ಮರ–ಗಿಡಗಳನ್ನು ಕಡಿದೆವು. ಪ್ರಾಣಿ–ಪಕ್ಷಿಗಳನ್ನು ದಿಕ್ಕಾಪಾಲು ಮಾಡಿದೆವು. ಅಪಾರ ವಿಷವುಣಿಸಿ ಬೆಳೆ ತೆಗೆದೆವು. ಅದನ್ನು ಮಾರಿ ಮತ್ತೆ ಕಾರು, ಫ್ರಿಡ್ಜ್, ಎ.ಸಿ. ಹಾಕಿಸಿಕೊಂಡು ಮತ್ತೆ ಪರಿಸರಕ್ಕೆ ವಿಷವನ್ನೇ ಕಕ್ಕಿದೆವು. ಮತ್ತೆ ಭೂಮಿ ಇದೆಲ್ಲವನ್ನು ಉಂಡು ಮಣ್ಣು, ಗಾಳಿ, ನೀರು ಎಲ್ಲ ವಿಷವಾಗಿ ಉಷ್ಣಾಂಶ ಏರಿ ಭೂಮಿಯೇ ಒಂದು ರೀತಿ ಅಗ್ನಿ ಕುಂಡದಂತಾಗಿದೆ.

ಪರಿಸರವನ್ನು ಸಮತೋಲನದಲ್ಲಿಡಲು ಯಾವುದೇ ವಸ್ತುವನ್ನು ಮರುಬಳಕೆ ಮಾಡುತ್ತಿಲ್ಲ. ಉದಾಹರಣೆಗೆ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುತ್ತಿಲ್ಲ. ಸಂಸ್ಕರಣೆ ಮಾಡಿ ಹೊಸ ವಸ್ತು ಉತ್ಪಾದಿಸುತ್ತಿಲ್ಲ.

ನಗರಗಳು ತಿಪ್ಪೆಗುಂಡಿಯಾಗುತ್ತಿವೆ. ಈಗ ಹಳ್ಳಿಗಳಲ್ಲೂ ಕೂಡ ಶುದ್ಧ ಪರಿಸರವನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಯಾರ ಹೊಲ, ತೋಟ, ಗದ್ದೆ ಬದಿಯಲ್ಲೂ ಬರೀ ವಿಷವನ್ನು ಸಿಂಪಡಿಸಿದ ಬಾಟಲುಗಳು ಕಾಣುತ್ತವೆ. ಅವುಗಳನ್ನು ಎಲ್ಲಿ ಬೇಕೆಂದರ'ಲ್ಲೇ ಬಿಸಾಕಿರುತ್ತಾರೆ. ಇದರಿಂದ ಮಣ್ಣು, ಗಾಳಿ, ನೀರು ವಿಷವುಂಡು ಇಡೀ ಭೂಮಿಯೇ 'ನಂಜುಂಡ'ನಂತಾಗಿದೆ.

ಇತ್ತೀಚೆಗೆ ಯುವಕರಂತೂ ಬೀರು, ಷರಾಯಿ ಬಾಟಲಿಗಳನ್ನು ಮತ್ತು ಪ್ಲಾಸ್ಟಿಕ್ ಪೌಚ್‌ಗಳಲ್ಲಿ ಮಧ್ಯ ಇನ್ನಿತರ ತಿನಿಸುಗಳನ್ನು ತಂದು ಹಾದಿ–ಬೀದಿ, ರಸ್ತೆ ಮತ್ತು ಪರಿಸರದ ಪ್ರಶಸ್ತ ಸ್ಥಳಗಳಲ್ಲಿ ಕುಡಿದು ತಿಂದು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಅಲ್ಲಿಯೇ ಬಿಸಾಕಿ ಹೋಗುವುದನ್ನು ನೋಡಿದರೆ, ಪರಿಸರಕ್ಕೂ ಈ ಭೂಮಿಗೂ ಮತ್ತು ಇವರಿಗೂ ಯಾವುದೇ ಸಂಬಂಧವಿಲ್ಲವೇನೋ ಅನಿಸುತ್ತದೆ.

ತಾವು ಬಳಸಿದ ಪ್ಲಾಸ್ಟಿಕ್ ಬಾಟಲಿಗಳನ್ನು ಗುಜರಿಯವನಿಗೆ ಕೊಟ್ಟರೂ ಎರಡು ಕಾಸು ಸಿಕ್ಕೀತು. ಪರಿಸರ ಅಂದವಾಗಿಯೂ ಕಾಣುತ್ತದೆ. ಈ ಭೂಮಿಯನ್ನು ಭವಿಷ್ಯದಲ್ಲಿ ನಮ್ಮ ಮಕ್ಕಳಿಗೆ ಹಾಗೂ ಮುಂದಿನ ಪೀಳಿಗೆಗೆ ಅದ್ಯಾವ ರೀತಿ ಉಡುಗೊರೆಯಾಗಿ ಕೊಡುತ್ತಾರೋ ದೇವರೆ ಬಲ್ಲ.

"ಸರಳ ಜೀವನ ಉನ್ನತ ಚಿಂತನೆ" ಎನ್ನುವ ಬದಲು (Simple living High Thinking) ಪ್ರತಿಯೊಬ್ಬರು Simple living High Looting ಎನ್ನುವಂತಾಗಿದೆ.

ಈ ಭೂಮಿಗೆ ಬೇಲಿ ಹಾಕಿಕೊಂಡಿರುವುದು ನಮ್ಮ ಮೂರ್ಖತನವೇ ಹೊರತು ಮತ್ತೇನಿಲ್ಲ. ದೇವರು ಮತ್ತು ಪ್ರಕೃತಿ ಕೂಡ ಭೂಮಿಯನ್ನು ಪುಕ್ಕಟೆಯಾಗಿ ಬಾಡಿಗೆಗೆ ನೀಡಿದೆ. ಈ ಬಾಡಿಗೆ ಮನೆಯಿಂದ ಎಲ್ಲರೂ ಹೋಗಲೇಬೇಕಲ್ವಾ? ನಾವು ಸತ್ತ ನಂತರ ನಮ್ಮ ಜಮೀನು ಮತ್ತು ನಮ್ಮ ಮನೆಯಲ್ಲಿ ಇನ್ಯಾರೋ ಬಂದು ವಾಸ ಮಾಡುತ್ತಾರೆ. ಇರುವಷ್ಟು ದಿನ ಈ ಭೂಮಿಗೆ ಗೌರವಿಸುತ್ತ, ಪರಿಸರ ಮತ್ತು ನಮ್ಮ ನಡುವೆ ಒಂದು ಅವಿನಾಭಾವ ಕ್ರಿಯಾತ್ಮಕ ಸಂಬಂಧ ಇದೆ ಎಂಬ ಭಾವನೆಯನ್ನು ಇಟ್ಟುಕೊಳ್ಳಬೇಕು. ಪರಿಸರವನ್ನು ಹಿತಮಿತವಾಗಿ ಬಳಸುತ್ತಾ ಬದುಕುವುದು ಪ್ರತಿಯೊಬ್ಬನ ಕರ್ತವ್ಯ.

ಮಣ್ಣಿಗೆ ಹಾಕಿದರೆ ಕರಗದ, ಸುಟ್ಟರೆ ಶುದ್ಧ ಗಾಳಿಯನ್ನು ಕೆಡಿಸುವ, ಹಾಗೇ ಬಿಟ್ಟರೇ ಗಾಳಿಪಟದಂತೆ ಹಾರಾಡುವ ಪ್ಲಾಸ್ಟಿಕ್; ಮಣ್ಣು, ಗಾಳಿ ಹಾಗೂ ದೃಶ್ಯ ಮಾಲಿನ್ಯ ಮಾಡುತ್ತದೆ. ಪ್ಲಾಸ್ಟಿಕ್ ಬದಲಿಗೆ ಬಟ್ಟೆ–ಚೀಲ ಬಳಸಿದರೆ ನಮ್ಮ ಆರೋಗ್ಯ ಮತ್ತು ಹಣ ಉಳಿತಾಯವಾಗುತ್ತದೆ.

ರೈತರು ಸಾವಯವ ಕೃಷಿ, ಸಹಜ ಕೃಷಿ ಹಾಗೂ ಸುಸ್ಥಿರ ಬೇಸಾಯ ಪದ್ಧತಿಗಳನ್ನು ಅನುಸರಿಸಿದರೆ, ಭೂಮಿಗೆ ವಿಷವನ್ನು ಉಣಿಸುವುದನ್ನು ಕಡಿಮೆ ಮಾಡಬಹುದು. ಸರ್ಕಾರ ರಾಸಾಯನಿಕ ಮತ್ತು ವಿಷ ತ್ಯಾಜ್ಯಗಳನ್ನು ಬಿಡುಗಡೆಮಾಡುವ ಕೈಗಾರಿಕೆಗಳಿಗೆ ಸೂಕ್ತ ಮಾರ್ಗದರ್ಶನವನ್ನು ಮಾಡಬೇಕು ಮತ್ತು ನಿಯಂತ್ರಣವನ್ನು ಹೇರಬೇಕು. ಪರಿಸರ ಸ್ನೇಹಿ ಕೈಗಾರಿಕೆಗಳಿಗೆ ಒತ್ತು ನೀಡಬೇಕು.

ಆದಷ್ಟು ಗೃಹ ಕೈಗಾರಿಕೆಗೆಳಿಗೆ ಮತ್ತು ಸಣ್ಣ ಕೈಗಾರಿಕೆಗಳಿಗೆ ಒತ್ತು ಕೊಡುವುದರಿಂದ, ಪರಿಸರ ಮಾಲಿನ್ಯವನ್ನು ಸಾಕಷ್ಟು ಕಡಿಮೆ ಮಾಡಬಹುದು. ಇದರಿಂದ ಸಮತೋಲನ ಪರಿಸರಕ್ಕೆ ಪೂರಕವಾದ ಸಸ್ಯ ಮತ್ತು ಜೀವ ವೈವಿಧ್ಯ ಬದುಕಿ ಉಳಿಯಲು ಸಾಧ್ಯ. ಗಿಡ ನೆಡೋಣ, ಮರ ಬೆಳೆಸೋಣ ಭೂಮಿಯನ್ನು ತಂಪಾಗಿಸೋಣ

ಇಲ್ಲವೆಂದರೆ ಅತೀ ಬಿಸಿಲಿಗೆ ನೂರಾರು ಜನ ಸಾವು, ಅತೀ ಚಳಿಗೆ ಹತ್ತಾರು ಸಾವು, ಪ್ರವಾಹಕ್ಕೆ ಸಾವಿರಾರು ಮನೆ–ಮಠ ಹಾಗೂ ಪ್ರಾಣ ಹಾನಿ ಎಂಬುದು ನಿತ್ಯ ಸುದ್ಧಿಯಾಗುತ್ತದೆ.


ಭೂಕಂಪ, ಜ್ವಾಲಾಮುಖಿ, ಮೇಘ ಸ್ಫೋಟ, ಬರಗಾಲ, ಅತಿವೃಷ್ಟಿ ಮುಂದೆ ಸಾಮಾನ್ಯ ಸಂಗತಿಗಳಾಗುತ್ತವೆ. ಎಚ್ಚರ! ಇಡೀ ಮನುಕುಲ ಈಗ living on the Edge! ಎನ್ನುವಂತಾಗಿದೆ.

ಭೂಮಿ ಈಗ ಎಮರ್ಜೆನ್ಸಿ ವಾರ್ಡ್‌ನಲ್ಲಿದೆ. ಅದು ವಾಪಸ್ ಜನರಲ್ ವಾರ್ಡ್‌ಗೆ ಬಂದು ನಮ್ಮನ್ನು ಸಾಕುವ ಶಕ್ತಿ ಪಡೆಯಬೇಕು. ಇಲ್ಲವಾದರೇ, ಐಸಿಯುಗೆ ತೆರಳುತ್ತದೆ. ಇದರಿಂದ ಮಾನವನ ಬದುಕಿಗೆ ಗ್ಯಾರಂಟಿ ಇಲ್ಲ!

# ಅಭಿಜಿತ್ ಪ್ರಕಾಶನದ ಸಾಧನೆಗೀಗ ಇಪ್ಪತ್ತು ವರ್ಷ

**ಕಲಾ ಭಾಗ್ವತ್**

ಭಾಷಿಕ ಸಂವಹನವು ಮನುಷ್ಯ ನಾಗರಿಕತೆಯ ದಾರಿಯಲ್ಲಿ ಕಂಡುಕೊಂಡ ಕ್ರಿಯೆ. ದಿನನಿತ್ಯದ ವ್ಯವಹಾರಗಳ ವಿವರದ ದಾಖಲೆಗಾಗಿ ಅದು ಹುಟ್ಟಿಕೊಂಡಿತು ಎನ್ನಬಹುದೇನೋ. ನಮ್ಮೊಳಗೆ ನಾವು ಇಳಿಯಲು ಸಹಾಯ ಮಾಡುವುದು ಭಾಷೆಯೆಂಬ ಸೋಪಾನ. ಅವಿರತವಾಗಿ ಅವರವರ ಇಂಗಿತವನ್ನು ಭಾಷೆಯ ಮೂಲಕವೇ ಜನ ಮನಗಳಿಗೆ ಹೇಳುವುದು ಜಗದ ನಿಯಮವಾಗಿದೆ. ಗತಕಾಲದಿಂದಲೂ ಶಿಲೆಗಳ ಮೇಲೆ, ತಾಮ್ರದ ಪಟಗಳ ಮೇಲೆ, ತಾಳೆ ಗರಿಗಳ ಮೇಲೆ ಅಕ್ಷರಗಳನ್ನು ಅಚ್ಚು ಮಾಡಿದ್ದರ ಹಿಂದಿರುವ ಉದ್ದೇಶವೇನಿತ್ತು? ಇಂದಿನ ದಿನಗಳಲ್ಲಿ ಕೃತಿಗಳನ್ನು ಪ್ರಕಟಿಸುವ ಕಾರಣವೇನು? ಇವೆರಡಕ್ಕೂ ಉತ್ತರ




'ತ್ರಿಕಾಲಪ್ರಜ್ಞೆ'ಯೇ? ನಮ್ಮ ಓದಿನ ಸಂಸ್ಕೃತಿ ಆರಂಭವಾದದ್ದು ಮಣ್ಣಿನ ಶಿಲಾಪಲಕಗಳಿಂದ. ಆ ನಂತರವೇ ಮಾನವ ರೂಪುಗೊಳ್ಳುತ್ತ ಬಂದು ಪ್ರಸ್ತುತದಲ್ಲಿ ತನ್ನದಲ್ಲದ ಲೋಕದ ಬಗೆಗೂ ತಿಳಿಯುವಂತಾಗಿದೆ. ಇವೆಲ್ಲವೂ ಓದುವ, ದಾಖಲಿಸುವ ಸಂಸ್ಕೃತಿಯಿಂದಲೇ ಹುಟ್ಟಿಕೊಂಡ ನಡವಳಿಕೆಗಳು ಎಂಬುದಾಗಿ ಹಿಂದಣ ಹೆಜ್ಜೆಗಳು ಹೇಳುತ್ತವೆ. ನಮ್ಮ ನಡೆ ಪಡೆ ಎಲ್ಲವನ್ನು ಸಂಸ್ಕಾರಗೊಳಿಸಿ ಅದನ್ನು ತಲೆಮಾರಿನಿಂದ ತಲೆಮಾರಿಗೆ ಬೆಳೆಸಿಕೊಂಡು ಹೋಗಬೇಕೆಂದರೆ ಅದಕ್ಕೆ ತಕ್ಕ ಸಿದ್ಧತೆಯನ್ನು ಮಾಡಬೇಕಾಗುವುದು. ಇಲ್ಲವಾದರೆ ಆ ಹರಿವು ಎಲ್ಲೋ ಒಂದು ಕಡೆ ಸ್ಥಗಿತವಾಗುತ್ತದೆ. ಮನದಿಂದಲೇ ಬದುಕನ್ನು ಓದುವುದರಿಂದ ಮೂಡಿದ ಬೆಳಕು ಒಂದು ಬಗೆಯದು. ಬುದ್ಧಿಯ ಉದ್ದೀಪನ, ಅನುಭವದ ಅಭಿವ್ಯಕ್ತಿ, ತಿಳುವಳಿಕೆಯ ತಂಪು ಎಲ್ಲವೂ ಒಂದಾಗಿ ಹುಟ್ಟಿಕೊಳ್ಳುವ 'ಸರ್ವ ಹೃದಯ ಸಂಸ್ಕಾರಿ'ಯಾದ ಪುಸ್ತಕಗಳಿಗೆ ಹೊಸ ಹೊಳಪನ್ನು ನೀಡುವುದು ಇನ್ನೊಂದು ಬಗೆ. ಅದೇ ಪ್ರಕಾಶನ. ನಮ್ಮ ನೆಲದಲ್ಲೇ ಇದ್ದುಕೊಂಡು ಇದನ್ನು ಮಾಡುವಾಗ ಭಾಧಕಗಳು ಕಡಿಮೆ. ಆದರೆ ಬಹು ಸಂಸ್ಕೃತಿಯ ನೆಲದಲ್ಲಿ ನಿಂತು ಕನ್ನಡದ ನೆಲಕ್ಕೆ ಹೊಳಪು ಕೊಡುವುದು ಕಷ್ಟಸಾಧ್ಯ. ಹೀಗಿರುವಾಗ ಹೊರನಾಡಾದ ಮುಂಬೈ ಯಲ್ಲಿ 2004 ರಲ್ಲಿ ಆರಂಭವಾಗಿ ಪುಸ್ತಕ ಪ್ರಕಟಣೆಯನ್ನು ಸಾರಸ್ವತ ವ್ರತವೆಂಬಂತೇ ಪಾಲಿಸಿಕೊಂಡು ಬಂದಿರುವ ಅಭಿಜಿತ್ ಪ್ರಕಾಶನದ ಇಪ್ಪತ್ತು ವಸಂತಗಳು ಅರ್ಥಪೂರ್ಣವಾಗಿ ಕಳೆದಿವುದು ಹೆಮ್ಮೆ ಪಡಬೇಕಾದ ಸಂಗತಿ. ಮರಿಯಪ್ಪ ನಾಟೇಕರ್ ಅವರ 'ಇತಿಹಾಸವನ್ನು ಮರೆತವರು' ಎಂಬ ಕವನ ಸಂಕಲನವು ಇದರ ಮೊದಲ ಪ್ರಕಟಣೆಯಾಗಿದ್ದು ಈ ತನಕ ಸುಮಾರು 130 ವೈವಿಧ್ಯಮಯವಾದ ಕೃತಿಗಳನ್ನು ಪ್ರಕಟಿಸುವ ಮೂಲಕ ಮುಂಬೈಯ ಅನೇಕ ಹೊಸ ಬರಹಗಾರರನ್ನು ಬೆಳಕಿಗೆ ತರುವಲ್ಲಿ ಅಭಿಜಿತ್ ಪ್ರಕಾಶನ ಸಂಸ್ಥೆ ಯಶಸ್ವಿಯಾಗಿದೆ.

"ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸಜ್ಜರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿದರ್ಗೆರೆವಟ್ಟಾಗಿರು ಶಿಷ್ಟರಂ ಪೊರೆ" (ಕೆರೆಯ ಕಟ್ಟಿಸು, ಬಾವಿಯನ್ನು ಸವೆಸು, ದೇವಾಲಯಗಳನ್ನು ನಿರ್ಮಿಸು, ಸೆರೆಸಿಕ್ಕ ಅನಾಥರನ್ನು ಬಿಡಿಸು, ನಂಬಿದ ಮಿತ್ರರಿಗೆ ನೆರವು ನೀಡು, ಶಿಷ್ಟರನ್ನು ರಕ್ಷಿಸು) ಎಂಬ ಶಾಸನ ವಚನದ ಸಾಲುಗಳು ಕೆಲವು ವ್ಯಕ್ತಿಗಳನ್ನು ಕಂಡಾಗ ತಂತಾನೆ ನೆನಪಿಗೆ ಬರುವವು. ಕನ್ನಡ ತಾಯಿಯು ಆಗಾಗ ಬಂದು ನಾಡು, ನುಡಿ, ಸಾಹಿತ್ಯವನ್ನು ಕಟ್ಟುವುದು ಹೇಗೆ ಎಂಬುದನ್ನು ಅಂಥವರಿಗೆ ಹೇಳಿ ಹೋಗುವಳೋ ಎಂಬ ಗುಮಾನಿ ಬರುವಷ್ಟು ಅವರು ಕನ್ನಡದ ಕೆಲಸದಲ್ಲಿ ತಮ್ಮನ್ನು ತೇಯ್ದುಕೊಳ್ಳುತ್ತಾರೆ. ಅಂತಹ ವಿರಳರಾಗಿ ಮುಂಬೈಯ ಅಭಿಜಿತ್ ಪ್ರಕಾಶನದ ಸಂಚಾಲಕರಾದ ಪ್ರಾ. ಜಿ ಎನ್ ಉಪಾಧ್ಯ ಅವರು ಕಾಣುತ್ತಾರೆ. ಹಲವು ಲೇಖಕರಿಗೆ ಗುರುತನ್ನು ಕೊಡುವ ಗುರುವಾಗಿ ಅವರು ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮುಂಬೈ ಮಹಾನಗರದಲ್ಲಿ ನೆಲೆ ನಿಂತು ಈ ಮಣ್ಣಿನಲ್ಲಿ ಕನ್ನಡತನವನ್ನು ಹುಡುಕಿ ಅದಕ್ಕೆ ಕಸುವು ತುಂಬುವಲ್ಲಿ ವಿಶೇಷ ಆಸ್ಥೆಯನ್ನು ಹೊಂದಿ ಉಭಯ ನಾಡುಗಳಿಗೆ ಕೊಂಡಿಯಾಗಿ ಅವರು ಕೊಟ್ಟ ಕೊಡುಗೆ ಗಮನಾರ್ಹವಾದುದು. ವರ್ತಮಾನದ ಸಮಾಜದಲ್ಲಿ ಸಾಹಿತ್ಯದ ಕುರಿತು ಹೊಸ ಪ್ರಜ್ಞೆಯನ್ನು ಮೂಡಿಸುವ ಜವಾಬ್ದಾರಿ ಅವರ ಮಾತು ಕೃತಿಗಳಲ್ಲಿ ಎದ್ದು ಕಾಣುತ್ತದೆ. ನಿಖರವಾದ ಶಾಸ್ತ್ರದೃಷ್ಟಿ, ವೈಜ್ಞಾನಿಕ ಮನೋಭಾವ, ಪಾರಿಭಾಷಿಕ ಪದಗಳ ಪರಿಜ್ಞಾನ, ಔಚಿತ್ಯಪ್ರಜ್ಞೆ, ನಿಸ್ವಾರ್ಥ, ವಿಶಾಲ ಮನಸ್ಥಿತಿ ಎಲ್ಲವನ್ನು ಸಿದ್ಧಿಸಿಕೊಂಡಿರುವ ಕಾಯಕಯೋಗಿಯು ಹಿಡಿದ ಕೆಲಸದಲ್ಲಿ ಹಿನ್ನಡೆಯದೇ ಲೇಖಕರಿಗೆ ಹೊರೆಯಾಗದಂತೆ ಪ್ರಕಟಣೆಯ ಕಾರ್ಯವನ್ನು ಕೈಗೊಂಡು ಈ ಪ್ರಕಾಶನ ಸಂಸ್ಥೆಯನ್ನು ಸಶಕ್ತವಾಗಿ ಮುನ್ನಡೆಸುತ್ತಿರುವುದು ದೊಡ್ಡ ಸಾಧನೆ.

"ಭಾಷೆಯ ಬಣ್ಣ ಬನಿಯನ್ನು ಗಾಢಗೊಳಿಸಲು ಸಾಹಿತ್ಯವು ಪೂರಕ. ಸಾಹಿತ್ಯ ಕೃತಿಗಳ ಮೂಲಕ ನಾಡಿನ ಇತಿಹಾಸ, ಹಿರಿಮೆ ಗರಿಮೆಯನ್ನು ಹೊಸ ತಲೆಮಾರಿಗೆ ಪರಿಚಯಿಸಲು ಸಾಧ್ಯ. ಇದು ಕನ್ನಡದ ತೇರನೆಳೆಯುವ, ಕನ್ನಡವನ್ನು ಕಟ್ಟಿ ಬೆಳೆಸುವ ಕಾಯಕ. ಎದುರಾಗುವ ಅಡೆತಡೆಗಳನ್ನು ದಾಟಿ ಈ ಕೆಲಸವು ನಿರಂತರವಾಗಿ ನಡೆಯಬೇಕಾಗಿದೆ." ಎನ್ನುವ ಕಾಳಜಿಯೇ ಅವರ ಕನ್ನಡ ಪರಿಚಾರಿಕೆಗೆ ಸ್ಫೂರ್ತಿ ಎನ್ನಬಹುದು. ಅನೇಕ ಹಿರಿಯ ಸಾಹಿತಿಗಳ, ವಿದ್ವಾಂಸರ ಒಡನಾಟ, ಮಾರ್ಗದರ್ಶನ, ಸಹಾಯ, ಸಹಕಾರವನ್ನೇ ಶ್ರೀರಕ್ಷೆಯಾಗಿಟ್ಟುಕೊಂಡು ಕನ್ನಡ ಪರಿಚಾರಿಕೆಯನ್ನು ಅಲೆ ಬೇಸರವಿಲ್ಲದೆ ಅವರು ಮುಂಬೈಯಲ್ಲಿ ಮಾಡುತ್ತಿದ್ದಾರೆ. ಕನ್ನಡ ಮರಾಠಿ ಉಭಯ ಭಾಷಾಭಿಮಾನ, ಹಲವು ಸಂಸ್ಕೃತಿಗಳ ಹೊಂದಾಣಿಕೆ, ಎಲ್ಲವನ್ನೂ ಎಲ್ಲರನ್ನೂ ಅರಿಯುವ ಇಚ್ಛೆ ಇವೆಲ್ಲ ಉಪಾಧ್ಯ ಅವರಿಗೆ ನಿತ್ಯ ಚಿಂತನೆಯ ವಿಷಯಗಳು. ಅವರ ಪ್ರಕಟಣೆಯ ಕೈಂಕರ್ಯ ಕೇವಲ ಅಭಿಜಿತ್ ಪ್ರಕಾಶನಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಾಗಿ ಮುಂಬೈ ವಿವಿ ಕನ್ನಡ ವಿಭಾಗದ ಮುಖಾಂತರ ವಿದ್ಯಾರ್ಥಿಗಳ ಪಿಎಚ್.ಡಿ, ಎಂ ಫಿಲ್, ಎಂ ಎ ಅಧ್ಯಯನಕ್ಕೆ ಸಂಬಂಧಿಸಿದ ಎಂಬತ್ತಕ್ಕೂ ಹೆಚ್ಚು ಕೃತಿಗಳನ್ನು ಅವರು ಪ್ರಕಟಿಸಿದ್ದಾರೆ. ಇಂದು ಪ್ರಕಟಣೆಯಲ್ಲಿ ಎಲ್ಲ ವಿಭಾಗಗಳಿಗಿಂತ ಕನ್ನಡ ವಿಭಾಗವು ಮುಂಚೂಣಿಯಲ್ಲಿದೆ ಎನ್ನುವುದು ಕನ್ನಡದ ಹಿರಿಮೆ. ಅವರದೇ ಕೃತಿಗಳು ಎಂಬತ್ತೈದರಷ್ಟಿವೆ. ಒಟ್ಟಿನಲ್ಲಿ ಸುಮಾರು ಮುನ್ನೂರು ಕೃತಿಗಳ ಪ್ರಕಟಣೆಯ ಹಿಂದೆ ಅವರ ಅವಿರತ ಪರಿಶ್ರಮವಿದೆ ಎನ್ನುವುದು ಗಮನಾರ್ಹವಾಗಿದೆ.

ಬದುಕನ್ನು ಕಟ್ಟಿಕೊಳ್ಳಲು ಮುಂಬೈಗೆ ಬಂದವರ ಭಾವ ಪ್ರಪಂಚದ ಭಾರವನ್ನು ಹಗುರಾಗಿಸಿದ ವೈವಿಧ್ಯಮಯವಾದ ಕೃತಿಗಳ ಪ್ರಕಟಣೆಯು ಅಂದಿನ ಅಗತ್ಯತೆಯಾಗಿತ್ತು. ಅದನ್ನರಿತು ಮಹಾನಗರದಲ್ಲಿ ಹುಟ್ಟಿಕೊಂಡ ಅನೇಕ ಪ್ರಕಾಶನ ಸಂಸ್ಥೆಗಳ ಸಾಲಿನಲ್ಲಿ ನಿಂತು ಎರಡು ದಶಕಗಳ ಕಾಲ ಅವಿಚ್ಛಿನ್ನವಾಗಿ ಪ್ರಕಟಣೆಯ ಕಾರ್ಯವನ್ನು ಮುಂದುವರಿಸಿಕೊಂಡು ಬರುತ್ತಿರುವ ಅಭಿಜಿತ್ ಪ್ರಕಾಶನವು ಮುಂಬೈಯಲ್ಲಿ ಕನ್ನಡವು ಕೈ ಎತ್ತುವಂತೆ ಮಾಡುವಲ್ಲಿ ಇಂದು ಜಯಶಾಲಿಯಾಗಿದೆ. ಅಭಿನಂದನೆಗಳು.

# ಭಾರತ ವರ್ಷದ ಗುರುತುಗಳು

ಭಾರತ ವರ್ಷದ ಒಂದು ಗುರುತೆಂದರೆ, ಹಿಮಾಲಯದ ದಕ್ಷಿಣ ಭಾಗದ ಭೂಮಿಯೇ ಭಾರತ ವರ್ಷ. ಈ ಹಿಮಾಲಯದಿಂದಲೇ ಅನೇಕ ನದಿಗಳು ಇಳಿದು ಬಂದು, ಈ ನೆಲವನ್ನು ಸದಾ ಕಾಲದಲ್ಲಿಯೂ ಹಸಿರಾಗಿ ಇಟ್ಟಿರುತ್ತದೆ. ಎಲ್ಲಾ ನದಿಗಳೂ ಮೊದಲು ದಕ್ಷಿಣಕ್ಕೆ ಇಳಿದು ಆಮೇಲೆ ಪೂರ್ವಕ್ಕೋ, ಪಶ್ಚಿಮಕ್ಕೋ ಹರಿಯುತ್ತವೆ. ಹಿಮಾಲಯ ಒಂದು ಮಣ್ಣಿನ ಬೆಟ್ಟ. ಆ ಬೆಟ್ಟದಿಂದ ಆ ಮಣ್ಣನ್ನು ಈ ಬಯಲು ಸೀಮೆಗೆ ತಂದು, ಭೂಮಿಯನ್ನು ಹಸನಾಗಿ ಇಟ್ಟಿರುತ್ತವೆ ಈ ನದಿಗಳು.

ಹಾಗಾಗಿ ಮೂರು ಗುರುತುಗಳು. ಒಂದು ಸಿಂಧೂ ನದಿ. ಈ ನದಿಯನ್ನು ಪಶ್ಚಿಮದಿಂದ ಬಂದವರೆಲ್ಲಾ ಗುರುತಿಸಿ, ಈ ನದಿಯ ಪಾತ್ರ ಮತ್ತು ಆಚೆ ಇರುವ ಎಲ್ಲಾ ಭೂಮಿಗೂ ಈ ನದಿಯ ಹೆಸರನ್ನೇ ಇತ್ತರು. "ಸಿಂಧೂ"ವಿನಿಂದಲೇ "ಹಿಂದೂ' ಹೆಸರು ಗುರುತಾಯಿತು.

ಇನ್ನೊಂದು ಗುರುತು "ಸರಸ್ವತಿ". ಆದರೆ ಈ ನದಿ ಈಗ ಬತ್ತಿ ಹೋಗಿರುವುದರಿಂದ ಆ ಗುರುತು ಕಳೆದು ಹೋಗಿದೆ. ಆದರೆ ಈ ನದಿಯ ಪಾತ್ರದಲ್ಲಿಯೇ ನಮ್ಮ ನಾಡಿನ ಸಂಸ್ಕೃತಿ ಬೆಳೆದು ಬಂದಿರುವುದು. ಈಗ ನಮ್ಮೆಲ್ಲರಿಗೂ ಪರಿಚಯವಾಗಿದೆ. ಮಹಾಭಾರತದಲ್ಲಿ ಈ ನದಿಯ ದಡದಲ್ಲಿಯೇ ಕೃಷ್ಣ ತನ್ನ ರಥವನ್ನು ಹಸ್ತಿನಾವತಿಯಿಂದ ದ್ವಾರಕೆಗೆ ಓಡಿಸಿಕೊಂಡು ಬಂದ ದಾಖಲೆ ಇದೆ.

ಮೂರನೆಯ ಗುರುತು, ಗಂಗಾ ನದಿಯ ಗುರುತು. ಇದರ ದಡದಲ್ಲಿ ಅನೇಕ ಸಂಸ್ಕೃತಿಗಳು ಬೆಳೆದು ಬಂದು ನಮ್ಮ ನಾಡಿಗೆ ಹೆಗ್ಗುರುತಾಗಿದೆ. ಗಂಗೋತ್ರಿಯಿಂದ ಹರಿದು ಬಂದು, ಹರಿದ್ವಾರದಲ್ಲಿ ಅಗಲವಾಗಿ, ನಂತರ ಪ್ರಯಾಗರಾಜದಲ್ಲಿ ಯಮುನಾ, ಸರಯೂ ನದಿಗಳ ಜೊತೆಗೂಡಿ ಮುಂದೆ ವಾರಣಾಸಿ, ಗಯಾ, ಪಾಟಲೀಪುತ್ರ, ಆಮೇಲೆ ಬ್ರಹ್ಮಪುತ್ರದ ಜೊತೆ ಸೇರಿ ಬಂಗಾಳ ಕೊಲ್ಲಿಗೆ ಧುಮುಕವನ್ನು ನೋಡಲು ನಮ್ಮ ನಾಡಿನ ಮೂಲೆ ಮೂಲೆಯಿಂದ ಜನ ಬರುತ್ತಾ್ತರೆ. ಬದುಕು ಮುಗಿಯುವ ಮುನ್ನ ಕಾಶಿಯಿಂದ ವಿಶ್ವೇಶ್ವರನ ದರ್ಶನ ಮಾಡದಿದ್ದಾರೆ, ನಮ್ಮ ಬದುಕಿಗೆ ಏನೂ ಅರ್ಥವಿಲ್ಲವೆಂದು, ಶೈವರಾಗಲಿ, ವೈಷ್ಣವರಾಗಲಿ, ಬ್ರಾಹ್ಮಣರಾಗಲಿ , ಒಕ್ಕಲಿಗರಾಗಲಿ ಎಲ್ಲರೂ ನಂಬುತ್ತಾರೆ. ಇದು ನಮ್ಮ ನಾಡಿನ ಗುರುತು.

ಕರ್ಮ: ನಮ್ಮ ನಾಡಿನಲ್ಲಿ ದೇವರು ನಮಗೆ ಸರಿಯಾದ ದಾರಿಯನ್ನು ತೋರುತ್ತಾನೆ. ಆದರೆ ಅವನು ನಮಗೆ ಶಿಕ್ಷೆಯನ್ನಾಗಲಿ, ವರವನ್ನಾಗಲಿ ಕೊಡುವುದಿಲ್ಲ. ನಾವು ಮಾಡಿದ ಕರ್ಮ ನಮ್ಮನ್ನು ಶಿಕ್ಷೆ ಮಾಡುತ್ತದೆ. ಇದು ಪ್ರತಿ ಕ್ಷಣದಲ್ಲಿಯೂ ನಡೆಯುತ್ತದೆ.

ಪುನರ್ಜನ್ಮ: ಎಲ್ಲರೂ ಮತ್ತೆ ಮತ್ತೆ ಹುಟ್ಟುತ್ತಾರೆ. ಕೆಲವರು ಪುಣ್ಯವನ್ನು ಮಾಡಿ ಒಂದು ದೊಡ್ಡ ಆಲದ ಮರವಾಗಿ ಹುಟ್ಟಬಹುದು. ಹಾರಾಡುವ ಹಕ್ಕಿಯಾಗಿ ಹುಟ್ಟಬಹುದು. ಈಜಾಡುವ ಮೀನಾಗಿ ಹುಟ್ಟಬಹುದು. ಆದರೆ ಯಾರೂ ಸ್ವರ್ಗಕ್ಕೋ, ನರಕಕ್ಕೋ ಹೋಗುವುದಿಲ್ಲ. ಇದು ನಮ್ಮ ನಾಡಿನ ಹೆಗ್ಗುರುತು. ಬೇರೆ ಇನ್ನಾವ ನಾಡಿನಲಿಯೂ ಈ ಪುನರ್ಜನ್ಮದ ಕಲ್ಪನೆಯೇ ಇಲ್ಲ.

ಈ ಹೆಗ್ಗುರುತುಗಳೇ ನಮ್ಮ ನಾಡಿನ ಕುರುಹು.

---

## <u>ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ.ಎ ಅಧ್ಯಯನಕ್ಕೆ ಅವಕಾಶ</u>

ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗದಲ್ಲಿ ಎಂ.ಎ, ತರಗತಿಯ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯವು ಕನ್ನಡ ಎಂ. ಎ (ಸೆಮಿಸ್ಟರ್, ರೆಗ್ಯೂಲರ್) ಪ್ರಥಮ ವರ್ಷ ತರಗತಿ (2024–2025) ನೆಯ ಸಾಲಿನ ಅಧ್ಯಯನಕ್ಕೆ ಆಸಕ್ತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬಿ.ಎ, ಬಿ.ಕಾಂ, ಬಿ.ಎಸ್ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು. ತರಗತಿಗೆ ಹಾಜರಾತಿ ಕಡ್ಡಾಯವಿರುತ್ತದೆ.

ಸರ್ವ ಪ್ರಥಮರಾದ ವಿದ್ಯಾರ್ಥಿಯೊಬ್ಬರಿಗೆ ಎಂ.ಬಿ.ಕುಕ್ಯಾನ್ ಚಿನ್ನದ ಪದಕವನ್ನು ಸಹ ವಿಶ್ವವಿದ್ಯಾಲಯದಿಂದ ನೀಡಲಾಗುತ್ತದೆ.

ಆಸಕ್ತ ಅರ್ಹ ಅಭ್ಯರ್ಥಿಗಳು ಸ್ವಲಿಖಿತ ಅರ್ಜಿಯನ್ನು ಹಾಗೂ ಎಲ್ಲ ದಾಖಲೆಗಳ ಪ್ರತಿಯನ್ನು

**Dr. G. N. Upadhya, Head, Department of Kannada, University of Mumbai, Ranade Bhavan, Vidyanagari, Santacruz (East), Mumbai – 400 098 Email: kannadadepartment@gmail.com**


ಈ ವಿಳಾಸಕ್ಕೆ **ಜೂನ್ 12ರೊಳಗೆ ಕಳುಹಿಸಬಹುದು.** https://mu.samarth.edu.in/index.php/site/login ವಿಶ್ವವಿದ್ಯಾಲಯದ ಈ ಕೊಂಡಿಯನ್ನು ಬಳಸಿ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆಯಬಹುದು.

**ವಿಳಾಸ:– ಡಾ.ಜಿ.ಎನ್.ಉಪಾಧ್ಯ, ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ರಾನಡೆ ಭವನ, ವಿದ್ಯಾನಗರಿ, ಸಾಂತಾಕ್ರೂಜ್, (ಪೂರ್ವ) ಮುಂಬಯಿ– 400098**

Email: kannadadepartment@gmail.com (University Website www.mu.ac.in)

# ಧಾತು-ಮಾತುಗಳ ಸಮಾಲೋಚನೆಯ ಕೃತಿ 'ಕನ್ನಡ ನಾಡಿನ ಸಂಗೀತ ಸೌಭಾಗ್ಯ

✍ ಕಲಾ ಭಾಗ್ವತ್




ಲೇಖಕರು :ಸರೋಜಾ ಶ್ರೀನಾಥ್
ಶ್ರೀರಾಮ ಪ್ರಕಾಶನ, ಮಂಡ್ಯ
2024, ಬೆಲೆ ರೂ 300
ಪುಟಗಳು :269
ಸಂಪರ್ಕ :9448930173

'ಸಾಮವೇದದಿಂ ಗೀತಂ ಸಂಜಗ್ರಾಹ ಪಿತಾಮಹಃ' ಸಾಮವೇದದಿಂದ ಬ್ರಹ್ಮನು ಸಂಗೀತವನ್ನು ಸಂಗ್ರಹಿಸಿದನು ಎಂಬ ಮಾತಿದೆ. 'ನಾದಃ ಸಂಧಾನಂ' ಎನ್ನುವ ವೇದದ ಉಕ್ತಿಯು ಭಗವಂತನೆಂಬ ಚೈತನ್ಯದೊಂದಿಗೆ ಬೆರೆಯಲು 'ನಾದ' ಬಹಳ ಮುಖ್ಯ ಎನ್ನುವುದನ್ನು ಸಾರುತ್ತದೆ. ಪುರಾತನ ಕಾಲದಿಂದಲೂ ಸಂಗೀತ, ನೃತ್ಯ ಸಾಹಿತ್ಯ; ಒಟ್ಟಾರೆಯಾಗಿ ಕಲೆಯು ಭಾರತೀಯ ಪರಂಪರೆಯಲ್ಲಿ ಆತ್ಮಜ್ಞಾನದ ಸಾಧನವಾಗಿ ಬೆಳೆದುಬಂದಿರುವುದನ್ನು ಕಾಣಬಹುದು. ಸಂಗೀತ, ನೃತ್ಯ, ಸಾಹಿತ್ಯ ಸರಸ್ವತಿಯನ್ನು ಆರಾಧಿಸಿ ಅವೆಲ್ಲದರಲ್ಲಿ ಏಕತಾನರಾಗಿ ಆನಂದವನ್ನು ಅನುಭವಿಸುತ್ತ ಸಾಧನೆಗೈದವರು ವಿರಳ. 'ಕನ್ನಡ ನಾಡಿನ ಸಂಗೀತ ಸೌಭಾಗ್ಯ' ಕೃತಿಯ ಲೇಖಕರಾದ ವಿದುಷಿ ಶ್ರೀಮತಿ ಸರೋಜಾ ಶ್ರೀನಾಥ್ ಅವರದು ಅಂತಹ ವಿರಳ ವ್ಯಕ್ತಿತ್ವ. ಶಿಷ್ಯ ವೃಂದಕ್ಕೆ ಕಲೆಯ ಧಾರೆ ಎರೆದು, ಸಹಸ್ರಾರು ಶ್ರೋತೃಗಳ ಮನ ಗೆದ್ದು ತಪಸ್ವಿಯಂತೆ ಅವರು ಬಾಳುತ್ತಿದ್ದಾರೆ. ಒಮ್ಮೆ ನಾನು ಅವರನ್ನು ಅಲ್ಪಸಮಯದ ಮಟ್ಟಿಗೆ ತುರ್ತು ಭೇಟಿಯಾಗಲು ಅವರ ಮನೆಗೆ ಹೋಗುವ ಪ್ರಸಂಗ ಬಂತು. ಆದರದಿಂದ ನನ್ನನ್ನು ಬರಮಾಡಿಕೊಂಡು ಕುಶಲೋಪರಿ ವಿಚಾರಿಸುತ್ತಿರುವಾಗ ಎದುರಿಗೆ ಟಿಪಾಯಿಯ ಮೇಲೆ ಇಟ್ಟಿದ್ದ ಹಾಳೆಯ ಮೇಲೆ ನಾನಿನ್ನೂ ನೋಡದ ಲಿಪಿ ಬರೆದಿತ್ತು. ಅದರ ಬಗ್ಗೆ ಅವರಲ್ಲಿ ವಿಚಾರಿಸಿದಾಗ "ನಾನು ಒಂದು ಹೊಸ ಲಿಪಿಯನ್ನು ಬರೆಯಲು ಪ್ರಯತ್ನಿಸುತ್ತಿದ್ದೇನೆ. ಮೂಲಾಕ್ಷರಗಳು ಮುಗಿದಿವೆ, ಇನ್ನು ಒತ್ತಕ್ಷರಗಳನ್ನು ಮಾಡಲಿಕ್ಕಿದೆ" ಎಂದರು. ಅವರ ಸೃಜನಶೀಲ ನಿತ್ಯೋತ್ಸಾಹಿ ಮನವನ್ನು ಕಂಡು ನಾನು ಮೂಕ ವಿಸ್ಮಿತನಾದೆ. ಮಾರ್ಗ ಸಂಗೀತದ ಬಗೆಗೆ ವಿಶೇಷ ಅನುಭವವಿರುವ ಸರೋಜಾ ಶ್ರೀನಾಥ್ ಅವರು ಅದರ ಕುರಿತಾಗಿ ಬರವಣಿಗೆಯನ್ನೂ ಮಾಡುವ ಆಸಕ್ತಿಯನ್ನು ತೋರಿರುವುದು ವಿಶೇಷ. ಸಿಂಗಾಪುರದಲ್ಲಿ ವಾಸವಾಗಿರುವ ಅವರ ಕನ್ನಡ ಅಭಿಮಾನ ಕನ್ನಡ ಪರ ಕಾಳಜಿ ಎಲ್ಲರಿಗೂ ಮಾದರಿ. ತನ್ನ ಪ್ರತಿಭೆಯನ್ನು ಜ್ಞಾನಮಾರ್ಗ, ಗಾನ ಮಾರ್ಗ, ನೃತ್ಯದ ಮೂಲಕ ಜನ ಸಮೂಹದಲ್ಲಿ ಗುಣಾತ್ಮಕವಾಗಿ ವಿಸ್ತರಿಸುವ ಹಂಬಲ ಅವರಲ್ಲಿ ಎದ್ದು ಕಾಣುತ್ತದೆ. ಇದರ ಫಲವಾಗಿ ಈ ಕೃತಿ ಮೂಡಿಬಂದಿದೆ. ಮುಂಬೈಯ ಅಭಿಜಿತ್ ಪ್ರಕಾಶನ ಪ್ರಕಟಿಸಿದ ಈ ಕೃತಿಯು ಸರೋಜಾ ಶ್ರೀನಾಥ್ ಅವರ ಸಂಗೀತದ ಜ್ಞಾನವನ್ನು, ಅನುಭವವನ್ನು ಭಟ್ಟಿ ಇಳಿಸಿದಂತಿದೆ. ಸಂಸ್ಕೃತ, ತೆಲುಗು, ಪರ್ಶಿಯನ್, ಇಂಗ್ಲಿಷ್ ಇನ್ನಿತರ ಭಾಷೆಗಳ ಮುಖ್ಯ ಗ್ರಂಥಗಳಲ್ಲಿ, ಸಂಗೀತ, ನೃತ್ಯದ ಕುರಿತಾಗಿ ಇರುವಂತಹ ಮಹತ್ವದ ಮಾಹಿತಿಗಳನ್ನು ಜಾರಿ ಹೋಗಲು ಬಿಡದೆ ಜವಾಬ್ದಾರಿಯಿಂದ ಈ ಕೃತಿಯಲ್ಲಿ ಸಂಕಲಿಸಿದ್ದಾರೆ.

"ಕಲೆಯ ಬೀಡಾಗಿರುವ ಭಾರತ ದೇಶದಲ್ಲಿ ವೈವಿಧ್ಯಮಯವಾದ ಸಾಂಸ್ಕೃತಿಕ, ಸಾಮಾಜಿಕ, ಕಲಾತ್ಮಕ ಸಂಘಟನೆಗಳ ಬೆಳವಣಿಗೆಯನ್ನು ಪ್ರತಿಬಿಂಬಿಸುವ ವಿವಿಧ ಭಾಷೆಗಳಲ್ಲಿ ಪ್ರಜ್ವಲಿಸುತ್ತಿರುವ ಗೀತ, ವಾದ್ಯ ನೃತ್ಯಗಳ ಸಂಗಮವಾದ ದೈವಿ ಕಲೆಯೇ ಸಂಗೀತ. ಅಗಣಿತ ಸಂಗೀತ ಗ್ರಂಥಗಳು, ಪ್ರಬಂಧಗಳು, ಶಿಲ್ಪಗಳು, ಚಿತ್ರಗಳು, ಆಚಾರ ವಿಚಾರಗಳು, ಪ್ರಾಚೀನ ಹಾಗೂ ಇಂದಿನ ಜ್ಞಾನ ಭಂಡಾರಕ್ಕೆ ಅರ್ಪಿಸಿರುವ ಕೃತಿ ರತ್ನಗಳಾಗಿವೆ" ಎಂಬುದನ್ನು ಆರಂಭದಲ್ಲಿ ಹೇಳಿರುವ ಲೇಖಕರು ಅಂತಹ ಅಮೂಲ್ಯವಾದ ನೂರೈವತ್ತಕ್ಕೂ ಹೆಚ್ಚು ಸಂಗೀತ ಶಾಸ್ತ್ರ ಗ್ರಂಥಗಳ ಮೇಲೆ ಬೆಳಕು ಹಾಯಿಸಿ ತೋರಿಸಿದ್ದಾರೆ. ವೇದ, ಪುರಾಣಾದಿಯಾಗಿ ವಿದ್ವಾನ್ ಮೊಹಮ್ಮದ್ ರಜೀಜ ರಚಿಸಿದ 'ನಗಮತ್-ಇ-ಅಸಾಫಿ' ಎನ್ನುವ ಪರ್ಶಿಯನ್ ಭಾಷೆಯ ಸಂಗೀತ ಗ್ರಂಥ, ನೃತ್ಯದ ಸಂಪೂರ್ಣ ಚರಿತ್ರೆ, ಸಂಗೀತ ಸಾಹಿತ್ಯ ಲಕ್ಷಣಗಳ ವರ್ಣನೆಗಳಿರುವ ಲಕ್ಷಣ ಗ್ರಂಥಗಳನ್ನು ಭರತನ ನಾಟ್ಯ ಶಾಸ್ತ್ರದಿಂದ ಆದಿಯಾಗಿ ಸಿ. ಆರ್. ಆಚಾರ್ಯಲು ರಚಿಸಿದ 'ಕೂಚಿ ಪುಡಿ ಆರಾಧನಾ ನೃತ್ಯಮುಲು', ಪಂಡಿತ ಭೋಜ ರಚಿಸಿದ 'ಶೃಂಗಾರ ಪ್ರಕಾಶ', ನಾರಾಯಣದೇವ (ಕ್ರಿ. ಶ 1748-66) ರಚಿಸಿದ ಸಂಗೀತ ನಾರಾಯಣ, ಶ್ರೀ ಮಲ್ಲಾಕ್ಷ ಸಂಗೀತಂ, ಅಭಿನವ ರಾಗ ಮಂಜರಿ, ಮುಂಬಯಿಯ ಬಟ್ಕಂಡೆಯವರು ರಚಿಸಿದ 'ಹಿಂದುಸ್ತಾನಿ ಸಂಗೀತ ಪದ್ಧತಿ', ಡಾ. ಸಿರಿರಾಮ ಅವರು ಇಂಗ್ಲಿಷ್ ಭಾಷೆಯಲ್ಲಿ ಬರೆದ ದೈವಿಕ ನೃತ್ಯದ (Dance Divine) ವರೆಗಿನ ಗ್ರಂಥ ವಿಷಯಗಳು ಇದರಲ್ಲಿವೆ. 'ಕುಮಾರ ಸಂಭವ', 'ಋತು ಸಂಹಾರ', 'ಮೇಘದೂತ' ಇತ್ಯಾದಿ ಸಾಹಿತ್ಯ ಕೃತಿಗಳಲ್ಲಿ ಸಂಗೀತದ ಸಾಹಚರ್ಯವನ್ನು ಕೂಡ ಹೇಳಿದ್ದಾರೆ. ಭಾರತದ ವಾಗ್ಗೇಯಕಾರರು ಹಾಗೂ ಅವರ ಕೃತಿಗಳನ್ನು ಪರಿಚಯಿಸುವಾಗ ಅವರೆಲ್ಲ ಅಧ್ಯಯನ ಮಾಡಿದ ಸಂಗೀತ, ನೃತ್ಯ ಮುಂತಾದ ಕಲೆಗಳ ಲಕ್ಷಣಗಳನ್ನು ಹೇಳಲಾಗಿದೆ. 'ಸಂಗೀತ ಸೌಭಾಗ್ಯ' ಎನ್ನುವ ಭಾಗದಲ್ಲಿ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದ 176 ಸಾಧಕರನ್ನು ಒಟ್ಟಿಗೆ ತಂದು ಪರಿಚಯಿಸಿ ಅಧ್ಯಯನಾಸಕ್ತರಿಗೆ ಕೈಪಿಡಿಯ ರೂಪದಲ್ಲಿ ಕೊಡುವ ಮಹದುಪಕಾರವನ್ನು ಸರೋಜಾ ಶ್ರೀನಾಥ್ ಅವರು ಮಾಡಿದ್ದಾರೆ.

ಸಂಗೀತದಲ್ಲಿ 'ಅನಾಹತನಾದ' ಎನ್ನುವ ಒಂದು ಪರಿಭಾಷೆ ಇದೆ. ಅಂದರೆ ಯಾವುದೇ ಅಪ್ಪಳಿಸುವಿಕೆ ಇಲ್ಲದೆ, ಹವೆಯ ಒತ್ತಡವಿಲ್ಲದೆ, ಕಂಪನವಿಲ್ಲದೆ, ಘರ್ಷಣೆ ಇಲ್ಲದೆ, ಕಿವಿಯಲ್ಲಿ ನಾದ ಮಾತ್ರ ತುಂಬಿಯೇ ಇರುತ್ತದೆ. ಇದು ಬೇರೆ ಎಲ್ಲವನ್ನೂ ಮರೆಸುತ್ತದೆ. ಜೀವನದ ಜಂಜಾಟವನ್ನು ದೂರವಾಗಿಸುತ್ತದೆ. ಬಹುಕಾಲ ಮನಸ್ಸಿಗೆ ನೆಮ್ಮದಿಯನ್ನು ಉಂಟುಮಾಡುತ್ತದೆ. ಆತ್ಮಾನಂದವನ್ನು ನೀಡುತ್ತದೆ. ಒಂದು ಬಗೆಯ ತುರಿಯಾವಸ್ಥೆಯನ್ನು ಕೊಡುತ್ತದೆ. ಇಂತಹ ಅನಾಹತನಾದವನ್ನು ಹೊಮ್ಮಿಸಿ ರಾಜ ಮಾರ್ಗದಲ್ಲಿ ನಡೆದು ಹೋದ, ಅಪೂರ್ವ ಕೃತಿಗಳನ್ನು ರಚಿಸಿ ದಾರಿ ತೋರಿದ ಅನೇಕ ಸಂಗೀತ ಶಾಸ್ತ್ರಜ್ಞರನ್ನು, ಗೀತ ರಚನೆಕಾರರನ್ನು ಈ ಕೃತಿಯಲ್ಲಿ ಲೇಖಕರು ಪರಿಚಯಿಸಿದ್ದಾರೆ. ಮುಡಿ ಬಾಗಬೇಕು, ಮನಸ್ಸು ಮಾಗಬೇಕು, ಮೂಡುವ ವಿಚಾರಗಳು ಗುಣ ಪೂರ್ಣವಾಗಿರಬೇಕು, ಮಾಡುವ ಕೃತ್ಯ ಅರ್ಥಪೂರ್ಣವಾಗಿರಬೇಕು ಎನ್ನುವುದಕ್ಕೆ ವಿದುಷಿ ಸರೋಜ ಶ್ರೀನಾಥ್ ಹಾಗೂ ಅವರ ಈ ಕೃತಿಯೇ ಸಾಕ್ಷಿ.



# PUZZLES & TEASERS

I. **Easy Logic Puzzles:**

1. **Five people were eating apples, A finished before B, but behind C. D finished before E, but behind B. What was the finishing order?**
2. **Jack is looking at Anne. Anne is looking at George. Jack is married, George is not, and we don't know if Anne is married. Is a married person looking at an unmarried person?**
3. **A man has 53 socks in his drawer: 21 identical blue, 15 identical black and 17 identical red. The lights are out and he is completely in the dark. How many socks must he take out to make 100 percent certain he has at least one pair of black socks?**
4. **The day before two days after the day before tomorrow is Saturday. What day is it today?**


**II WORD PUZZLES:**

**A. What is very easy to get into but hard to get out?**
**B. I have eyes but I can't see. I live in the dark until you need me, What am I?**
**C. Spelled FORWARD, I am what you do every day. Spelled BACKWARD I am something you hate What am I?**
**D. A is the brother of B. B is the brother of C. C is the father of D. How is D is related to A?**
**E. If today is Saturday, what day of the week will it be in 365 days from now?**

**III. PUZZLE**


**I**

**Which domino (a, b, c, or d) should fill the empty space?**





**II**

**Here are five clocks. Four are perfect, but the fifth was damaged. Can you determine the time on clock e?**




**III**

**Pat the dog has laid out his bones for your inspection.**
**Can you deduce the order in which he placed them on the pile?**




## PUZZLES & TEASERS ANSWERS

**I. RIDDLES: 1. 42, 2. Eyes, 3 Heights, 4. South Africa, 5. Sweden - 270,000, 6. Mercury.**
**II QUIZZES: 1. ECHO, 2. Walk in the park, 3. He is Bald, 4. Silence, 5. A River, 6. The water is frozen.**
**III. PUZZLES: I. B, II. D, III. (1 = c, 2 = e, 3 = f, 4 = a, 5 = d, 6 = b).**

***Compiled by: Mr Ananth Banwasi***

# Why do we wage war?

**Anthony Lopez**

Despite the enormous costs to society, humans continue to fight and kill each other with ever-increasing efficiency.


WSU political scientist **Anthony Lopez** thinks there may be an evolutionary basis to our hostility. He studies the role warfare has played in human evolution.

In a recent paper published in the journal *International Theory*, Lopez proposes that the modern day social, moral, and political intuitions about how people ought to behave when their group or country is threatened are likely the result of evolved psychological adaptations to a much earlier and warlike lifestyle.

In other words, while modern warfare bears little resemblance to the hand-to-hand combat of humanity's hunter-gatherer ancestors, many of the underlying reasons we fight remain the same.

"When we examine warfare from an evolutionary perspective, it becomes evident that there are very basic and recurrent dynamics that have motivated groups of humans to commit violence against each other throughout history," Lopez said. "The more we learn about these underlying neurological motivations and how they developed, the more capable we will become at identifying new ways to deescalate conflicts."

Violent by design: Across Africa and Eurasia, archaeologists have discovered evidence of human-against-human violence dating back hundreds of thousands of years. Our early ancestors fought each other over territory, mates, and resources. According to established research, the genetic information responsible for aggression was passed down through each surviving generation in an evolutionary process known as natural selection.



"Le Moustier" by Charles Robert Knight [public domain]. Photo via Wikimedia Commons While a tremendous amount of research has been conducted on the evolution of anger and aggression between individuals, especially in humans and primates, the origins of group conflict, or war, and how it influenced early brain development remain a point of contention among evolutionary scholars.

From his examination of new archaeological evidence and advancements in neuroscience, Lopez believes humans possessed the cognitive tools to work together in waging war long before the advent of agriculture and settled communities, which occurred around 12,000 B.C.E.

For these early humans, warfare would have been reproductively worthwhile because the benefits of expanded territory and access to mates would have outweighed the upfront loss of life for the victors, Lopez says. And over tens of thousands of years, those groups of early humans that cultivated forms of social cohesion and identity to rally around would have prevailed in conflicts over other groups that lacked relative social skills and cooperation.

"Humans evolved a tendency toward aggression outside the group but cooperation within it because it benefited their long-term chances of survival and reproduction," Lopez said. "Over a long enough timeline, this tendency of within-group solidarity against an outside threat evolved into the set of psychological adaptations that humans use today to solve challenges related to war."

Adaptations for war: One of these adaptations is the concept of sacred values or symbols. From an evolutionary perspective, ancestral humans developed shared sacred values as a way to strengthen bonds within groups and increase solidarity in the face of danger.

Although the issues, objects, and symbols that groups hold as sacred vary tremendously across space and time, the nature of sacred values and people's reactions to their violation are cross-culturally universal.

Pablo Picasso's "Guernica," 1937, depicts Nazi bombing of the Basque town during the Spanish Civil War. Photo via Wikipedia.

Lopez believes this ancestral adaptation correlates directly with the way modern humans instinctively categorize themselves and others with unique symbols or beliefs that represent their identity. Sacred values need not be religious, but when they are, the predicted consequences of violating them are greater.

Many modern-day terrorist groups, such as ISIS and the Taliban, stick together and continue to fight despite numerical and technological disadvantages because they share sacred values, Lopez said.

"Sacred values are an important component of being a human in a community. Many of the individuals who are leaving the comforts of an American or European life to go and join a group like ISIS are seeking a communal identity that promises purpose and social meaning," Lopez said. "These are very basic desires that we can understand and that help to explain radicalization."

The psychological drive for revenge is another example of an ancestral human adaptation with an evolutionary impact, Lopez said. Research in neuroscience shows that the prospect of inflicting retaliatory punishment triggers pleasure centers in the brain.

Indeed, the desire for revenge has led to some of human history's most infamous wars.

"Hitler's rise to power is a well-known example of the ability of revenge to compel large-scale violence. And the very foundations of American identity have been shaped by its public reaction

to various events, such as the surprise attack on Pearl harbor and the terrorist attacks of September 11, 2001," Lopez said.



Evolutionary theory in international relations: Using evolutionary theory as a way to understand the enemy is a growing trend in international relations, Lopez said. After decades of intractable, overseas conflicts, the U.S. Department of Defense is now working with social and neuro-scientists to understand not only the enemy's intentions but also their psychology.

F-16A, F-15C and F-15E flying during Desert Storm. Photo: U.S. Air Force

"In the past, international relations scholars and policy makers tended to write off the behavior of our enemies as irrational," he said. "We are now starting to recognize that their motivations are actually very understandable. My hope is that policy makers will continue this trend of trying to understand our enemies' psychology as well as their intentions. It is a new and important step in international relations.

"A deeper understanding of the role of revenge in international relations could provide U.S. Policy makers with clearer guidance at times when our human psychology is specifically designed to cloud rather than clarify the costs and benefits of responsive action."

***– By Will Ferguson***

## ಮುಂಬರುವ ಕಾರ್ಯಕ್ರಮಗಳು

**ಶನಿವಾರ, 29.06.2024ರ ಸಂಜೆ 6.30ಕ್ಕೆ**

**ಸ್ಮಿತಾ ಬೆಳ್ಳೂರ್**

ಇವರಿಂದ ಗಾಯನ

ವಚನಗಳು, ದಾಸರ ಪದಗಳು, ಭಾವಗೀತೆಗಳು,
ಶಿಶುನಾಳ ಶರೀಫರ ಪದಗಳು ಮತ್ತು ಸೂಫಿ ಸಂಗೀತ



Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077